ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ-2017
ಬೆಲೆ ರೂ. 1



## ಹೊಸ ಭಾರತದ ಆಕಾಂಕ್ಷೆಗಳನ್ನು ನಿರೀಕ್ಷಿಸುವ ಹೊಸ ವರ್ಷ 2017

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 4
ಜನವರಿ 2017, ಬೆಲೆ ರೂ. 1

## ನೇರ ಮಾತು

ದೆಹಲಿಯ ಕನ್ನಡಿಗರಿಗೆ ವಿಶೇಷವಾಗಿ ಭಾಷೆ, ಸಾಹಿತ್ಯ ಕಾರ್ಯಕ್ರಮದ ಜೊತೆಗೆ ಕಲಾಸಕ್ತರಿಗೆ ಹತ್ತು ಹಲವು ಪ್ರಕಾರಗಳ ಎಡೆಬಿಡೆದ ಸಾಂಸ್ಕೃತಿಕ ರಸದೌತಣ ನೀಡುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದೇವೆ. ಪ್ರತಿ ವರ್ಷ ನಡೆಯುವ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು ಹೆಚ್ಚು ಗಮನ ನೀಡಿದ್ದೇವೆ. ಹಲವು ಸಾಹಿತ್ಯ ಕಾರ್ಯಕ್ರಮಗಳು ಪುಸ್ತಕರೂಪವನ್ನು ಪಡೆದುಕೊಳ್ಳಬಹುದಾದ, ಸಂಶೋಧನಾ ಯೋಗ್ಯವಾದ ಉತ್ಕೃಷ್ಟಮಟ್ಟದ್ದಾಗಿತ್ತು ಎನ್ನುವುದನ್ನು ಹಲವು ಸಾಹಿತ್ಯ ದಿಗ್ಗಜರು ಹೇಳಿರುವುದರಿಂದ ಆಯೋಜಕರಾದ ನಮಗೆ ಸಾರ್ಥಕತೆಯ ಭಾವನೆಯಿದೆ.

2017ರ ಪ್ರಥಮ ಸಂಚಿಕೆಯನ್ನು ತಮ್ಮ ಕೈಗೆ ಹೊಸ ವರ್ಷದ ಶುಭಾಶಯದೊಂದಿಗೆ ನೀಡುವ ಈ ಸಂದರ್ಭದಲ್ಲಿ ಹೊಸ ವರ್ಷ, ಹೊಸ ವರ್ಷದ ಜೊತೆಗೆ ಇನ್ನು ಹೊಸತಾದ ಕಾರ್ಯಕ್ರಮಗಳನ್ನು ನೀಡುವ ಪ್ರಯತ್ನ ನಮ್ಮದು. ಸಾಂಸ್ಕೃತಿಕ ಅಭಿರುಚಿಯ ಜೊತೆ ಜೊತೆಗೆ ಕನ್ನಡವನ್ನು ಓದುವ ಮತ್ತು ಬರೆಯುವ ಅಭಿರುಚಿಯನ್ನು ರೂಢಿಸಿಕೊಳ್ಳುವುದು ಕನ್ನಡ ನಾಡಿನಿಂದ ದೂರದಲ್ಲಿರುವ ನಮಗೆ ಬಹಳ ಅಗತ್ಯತೆಯಿದೆ. ಆದ್ದರಿಂದಲೇ ಸಂಘದ ಅಂಗಳದಲ್ಲಿ ಸ್ವರಚಿತ ಕವನಗಳ ವಾಚನ, ಪುಸ್ತಕ ಕೊಂಡು ಓದಿ ಅಭಿಯಾನ ಕಾರ್ಯಕ್ರಮಗಳನ್ನು ಹೊಸ ವರ್ಷದ ಮೊದಲ ದಿನವೇ ಹಮ್ಮಿಕೊಳ್ಳಲಾಗಿದೆ. ನಮ್ಮಲ್ಲಿರುವ ಕನ್ನಡದ ಪ್ರತಿಭೆಗಳನ್ನು ಹುರಿದುಂಬಿಸಲು ಇಂತಹ ಕಾರ್ಯಕ್ರಮಗಳು ನೆರವಾಗಲಿದೆ ಎಂಬುದು ನಮ್ಮ ಆಶಯ. ನಮ್ಮ ಜೊತೆಗೆ ನಮ್ಮ ಮಕ್ಕಳು ಚಿಕ್ಕ ಚಿಕ್ಕ ಕವನಗಳನ್ನು ಬರೆಯುವ ಮತ್ತು ಕವನಗಳನ್ನು ಓದುವ ಅಭಿರುಚಿಯನ್ನು ನಾವು ಬೆಳೆಸಿದಾಗ ಮುಂದಿನ ಪೀಳಿಗೆಗೆ ಕನ್ನಡವನ್ನು ಉಳಿಸಿ ಬೆಳೆಸಲು ನಾವು ಅಡಿಪಾಯ ಹಾಕಿದಂತಾಗುವುದು. ಅಂತಹ ಬರವಣಿಗೆಗಳಿಗೆ ಅಭಿಮತದಲ್ಲಿ ಸದಾ ಅವಕಾಶಗಳಿವೆ.

ಕಲೆಯ ಮೂಲಕ ನಮ್ಮ ಆರೋಗ್ಯದ ಕಡೆ ಗಮನಕೊಡುವುದಕ್ಕೆ ಹೊಸ ವರ್ಷದ ಮೊದಲ ದಿನದಂದು ಹಮ್ಮಿಕೊಂಡ ಯಕ್ಷಗಾನ 'ಧನ್ವಂತರಿ ಮಹಿಮೆ' ಒಂದು ಒಳ್ಳೆಯ ನೀತಿಯನ್ನು ತಿಳಿಸಿದೆ. ಸಮಾಜದಲ್ಲಿ ಮದ್ಯಪಾನ, ಧೂಮಪಾನ, ಡ್ರಗ್ಸ್ ಇತ್ಯಾದಿ ದುಶ್ಚಟಗಳಿಂದ ಮುಖ್ಯವಾಗಿ ನಮ್ಮ ಯುವ ಜನಾಂಗ ದಾರಿ ತಪ್ಪುತ್ತಿದ್ದಾರೆ. ಇವರನ್ನು ನಮ್ಮ ನಿರಂತರ ಒಟ್ಟು ಸೇರುವಿಕೆಯ ಮೂಲಕ, ನಮ್ಮ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಿಕೆಯ ಮೂಲಕ ಅವರನ್ನು 'ಒಂಟಿ' ಎನ್ನುವ ಭಾವನೆಯಿಂದ ಮುಕ್ತಗೊಳಿಸುವುದು ಅತೀ ಅಗತ್ಯ. ಪಾಶ್ಚಾತ್ಯ ಸಂಸ್ಕೃತಿಯತ್ತ ಅವರು ಮುಖ ಮಾಡದೇ ಕನ್ನಡದ, ಅಂದರೆ ಕರ್ನಾಟಕದ ಒಳ್ಳೆಯ ಸಂಸ್ಕೃತಿಯನ್ನು ಅವರಿಗೆ ನೀಡುವಲ್ಲಿ ನಾವು ಪ್ರಯತ್ನಿಸೋಣ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ

1. ಪುಸ್ತಕ ಕೊಂಡು ಓದಿ ಅಭಿಯಾನವನ್ನು ಉದ್ಘಾಟಿಸಿದವರು ಯಾರು ?
2. 'ದೆಹಲಿಯ ಕನ್ನಡ ಜಗತ್ತಿನಲ್ಲಿ' ಕೃತಿ ಬಿಡುಗಡೆ ಮಾಡಿದವರು ಯಾರು ?
3. ಇತ್ತೀಚೆಗೆ ನಮ್ಮನ್ನಗಲಿದ ಪ್ರಸಿದ್ಧ ನಾಟಕ ನಿರ್ದೇಶಕರು ಯಾರು ?
4. ಸಂಘದಲ್ಲಿ ನಡೆದ ಚಿತ್ರಕಲಾ ಪ್ರದರ್ಶನವು ಯಾವ ವಸ್ತು–ವಿಷಯವನ್ನು ಆಧರಿಸಿತ್ತು ?
5. ಈ ಬಾರಿ ನಡೆದ 'ಬಯಲಾಟ' ಕಾರ್ಯಕ್ರಮದ ಪ್ರಸಂಗ ಯಾವುದು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.01.2017ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಡಿಸೆಂಬರ್ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1) ಅಮೇರಿಕ ಅಮೇರಿಕ, ಕೊಟ್ರೇಶಿ ಕನಸು, ಬಾನಲ್ಲೆ ಮಧುಚಂದ್ರಕೆ 2) ಲತಾ ಹಂಸಲೇಖ 3) ಪ್ರೇಮಲೋಕ–ಪ್ರೇಮಲೋಕದಿಂದ ಬಂದ ಪ್ರೇಮದ ಸಂಗಾತಿ 4) ಭರತಭೂಮಿ ವರಪುತ್ರ–ಗಾಂಧಿಯ ಪಾತ್ರಧಾರಿ ಶ್ರೀ ರವಿ ಮೂಡಬಿದಿರೆ 5) ಡಾ. ಎಚ್.ಎಸ್. ಅನುಪಮಾ, ಅವರು ಡಾಕ್ಟರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಡಿ.ಎಸ್. ರಾಜಶೇಖರ, ಶ್ರೀ ಶ್ರೀಕಾಂತ್ ಆರ್ ಡಾ. ಪಿ. ರಾಮಕೃಷ್ಣ ಭಟ್ಟ, ಶ್ರೀ ಬಸವರಾಜು ಸಿ, ಶ್ರೀಮತಿ ಶಾಲಿನಿ ವಿ. ನಾಯಕ್

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ಮುನ್ನೋಟ

ತಮಗೆಲ್ಲರಿಗೂ ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು. ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆ ಜನವರಿ 22ರಂದು 'ಕೈರುಚಿ' ಸಂಘದ ಸದಸ್ಯರು ಮನೆಯಿಂದ ಮಾಡಿಕೊಂಡು ಬಂದ ಕರ್ನಾಟಕದ ವಿವಿಧ ಜಿಲ್ಲೆಗಳ ತಿಂಡಿ ತಿನಿಸುಗಳ ಆಹಾರ ಮೇಳವನ್ನು ಆಯೋಜಿಸುತ್ತಿದ್ದೇವೆ. ವಾರ್ಷಿಕೋತ್ಸವದ ಅಂಗವಾಗಿ 2016-17ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಫೆಬ್ರವರಿ 4 ಮತ್ತು 5ರಂದು ದೆಹಲಿಯ ಸಿವಿಲ್ ಸರ್ವಿಸ್ ಮೈದಾನದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಮುಂಬರುವ ದಿನಗಳಲ್ಲಿ ಪಿಕ್‌ನಿಕ್ ಆಯೋಜನೆ ಮಾಡಲಾಗುವುದು.

ಈ ಬಾರಿ ಸಂಘವು ವಿಶೇಷವಾಗಿ ದೆಹಲಿ ಕನ್ನಡಿಗರ ಸಾಹಿತ್ಯ-ಸಾಂಸ್ಕೃತಿಕ ಸಮ್ಮೇಳನ ಹಾಗೂ ಎರಡನೇ ದಿನ ಹೊರನಾಡ ಕನ್ನಡಿಗರ ಸಮ್ಮೇಳನವನ್ನು ಆಯೋಜಿಸುತ್ತಿದ್ದೇವೆ. ಇದಕ್ಕೆ ತಮ್ಮೆಲ್ಲರ ಸಹಕಾರ ಅವಶ್ಯ. ಈ ಎಲ್ಲಾ ಕಾರ್ಯಕ್ರಮಗಳ ಜೊತೆ ದೆಹಲಿ ಕರ್ನಾಟಕ ಸಂಘವು ಆಜೀವ ಸದಸ್ಯರುಗಳಿಗೆ ಆಪತ್ಕಾಲದಲ್ಲಿ ನೆರವಾಗಲು 'ಕ್ಷೇಮಾಭಿವೃದ್ಧಿ ನಿಧಿ'ಯನ್ನು ಸ್ಥಾಪಿಸಲು ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಠರಾವನ್ನು ಮಂಡಿಸುತ್ತಿದೆ. ಇದು ಸದಸ್ಯರುಗಳಿಗೆ ಅನುಕೂಲವಾಗಲಿದೆ ಎಂದು ಕಾರ್ಯಕಾರಿ ಸಮಿತಿಯು ಈ ನಿರ್ಧಾರವನ್ನು ತೆಗೆದುಕೊಂಡಿದೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ಜನವರಿ 22**
**ಭಾನುವಾರ**
**ಬೆಳಿಗ್ಗೆ : 11.00 ಗಂಟೆಗೆ**

**ಕೈರುಚಿ**



ಸಂಘದ ಆವರಣದಲ್ಲಿ 'ಕೈ ರುಚಿ' (ಆಹಾರ ಮೇಳ) ಸಾಂಸ್ಕೃತಿಕ ಕಾರ್ಯಕ್ರಮಗಳು.



ದೆಹಲಿಯ ಸ್ಥಳೀಯರಿಂದ ಕರ್ನಾಟಕದ ವಿವಿಧ ಜಿಲ್ಲೆಗಳ ನಾನಾ ರೀತಿಯ ಆಹಾರ ಪದಾರ್ಥಗಳು ಮತ್ತು ತಿಂಡಿತಿನಿಸುಗಳ ಪ್ರದರ್ಶನವನ್ನು ಮಾಡಲು ನಿರ್ಧರಿಸಿದೆ. ಪ್ರದರ್ಶನ ಸಮಯ ಬೆಳಿಗ್ಗೆ 11.00ರಿಂದ ಸಂಜೆ 4.00ರವರೆಗೆ. ಕೌಂಟರ್ ವ್ಯವಸ್ಥೆ, ಅಲಂಕಾರ, ಟೆಂಟ್ ಹೌಸ್ ಸಾಮಾನು, ಪ್ರಚಾರ, ಬ್ಯಾನರ್‌ಗಳನ್ನು ಸಂಘವು ಒದಗಿಸುವುದು.
ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಬೊಂಬೆ ಕುಣಿತ ನಡೆಯಲಿವೆ.

**2017 ಜನವರಿ 29**
**ಭಾನುವಾರ**
**ಮಧ್ಯಾಹ್ನ : 2.00 ಗಂಟೆಗೆ**

ಶ್ರೀಮತಿ ಸರೋಜಿನಿ ಎಸ್. ಶೆಟ್ಟಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿ ಪ್ರದಾನ ಮತ್ತು ಮನೋಹರ ಗ್ರಂಥ ಮಾಲಾ, ಧಾರವಾಡ-ಡಾ. ಶಿವರಾಮ ಕಾರಂತ ಪ್ರಶಸ್ತಿ
ನಾಟಕ : **'ಗಾಂಧಿಗೆ ಸಾವಿಲ್ಲ'**, ಮೂಲ ಹಿಂದಿ ನಾಟಕ, ರಚನೆ : **ಶ್ರೀ ಅಸ್ಗರ್ ವಜಾಹತ್**, ಕನ್ನಡಕ್ಕೆ : **ಶ್ರೀ ಹಸನ್‌ನಯಿಂ ಸುರಕೋಡ**, ನಿರ್ದೇಶನ : **ಶ್ರೀ ಶಿವಾನಂದ ಇಂಗಳೇಶ್ವರ**,
ಪ್ರಸ್ತುತಿ : **'ದಿನಕರ'** ತಂಡ

**2017 ಫೆಬ್ರವರಿ 12**
**ಭಾನುವಾರ**
**ಮಧ್ಯಾಹ್ನ : 3.00 ಗಂಟೆಗೆ**

ಸಂಘದ ಅಂಗಳದಲ್ಲಿ **'ಮುಕ್ತ ಮಾತುಕತೆ'**

**2017 ಫೆಬ್ರವರಿ 12**
**ಭಾನುವಾರ**
**ಮಧ್ಯಾಹ್ನ : 5.00 ಗಂಟೆಗೆ**

**'ನೃತ್ಯ ಸಿಂಚನ'**
ನೃತ್ಯನಿಕೇತನ ಕೊಡವೂರು ತಂಡದ ಕಲಾವಿದರಿಂದ

### ವೈದ್ಯಕೀಯ ಸಲಹೆಗಳು



**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15 ಜನವರಿ, 2017ರಂದು ಬೆಳಿಗ್ಗೆ 10 ಗಂಟೆಯಿಂದ.


**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 15, ಜನವರಿ, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 29 ಜನವರಿ, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 29 ಜನವರಿ, 2017ರಂದು ಸಾಯಂಕಾಲ 4 ಗಂಟೆಯಿಂದ.

**ಸೂಚನೆ**
ವೈದ್ಯರನ್ನು ಭೇಟಿ ಮಾಡುವವರು ತಮ್ಮ ಹೆಸರನ್ನು ಸಂಘದ ಕಛೇರಿಯಲ್ಲಿ ಮುಂಚಿನ ದಿನ ನೋಂದಾಯಿಸಬೇಕು.

**2017 ಫೆಬ್ರವರಿ 4, 5**
**ಶನಿವಾರ ಮತ್ತು ಭಾನುವಾರ**
**ಬೆಳಿಗ್ಗೆ : 9.00 ಗಂಟೆಗೆ**



ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವದ ಅಂಗವಾಗಿ 2016-17ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು **ಫೆಬ್ರವರಿ 4 ಮತ್ತು 5**ರಂದು ಸಿವಿಲ್ ಸರ್ವಿಸ್ ಗ್ರೌಂಡ್‌ನಲ್ಲಿ ಆಯೋಜಿಸಲು ನಿರ್ಧರಿಸಿದೆ.
ತಂಡದ ಹೆಸರುಗಳನ್ನು ನೋಂದಾಯಿಸಲು **28.01.2017** ಕೊನೆಯ ದಿನಾಂಕವಾಗಿರುತ್ತದೆ.
ಪ್ರವೇಶ ಶುಲ್ಕ **ರೂ. 1500/-**
ಆಟದಲ್ಲಿ ಕಡ್ಡಾಯವಾಗಿ ಕನ್ನಡಿಗರು ಹಾಗೂ ಸಂಘದ ಸದಸ್ಯರುಗಳು ಮಾತ್ರ ಭಾಗವಹಿಸಬಹುದಾಗಿದೆ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011-26109615 / 26104818

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 4
ಜನವರಿ 2016

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

# ಸಂಪಾದಕರ ಟಿಪ್ಪಣಿಗಳು

ಮುಖಪುಟ ಚಿತ್ರ
ಶ್ರೀ ಆನಂದ ಈಶ್ವರಪ್ಪ ಮುರಗೋಡ

## ಹೊಸವರ್ಷ ಹೊಸ ಆಕಾಂಕ್ಷೆ, ಹೊಸ ಭರವಸೆಗಳನ್ನು ನೀಡಲಿ

**ಅಭಿಮತದ ಓದುಗರಿಗೆಲ್ಲರಿಗೂ 2017 ಹೊಸವರ್ಷದ ಹಾರ್ದಿಕ ಶುಭಾಶಯಗಳು.**

ಜಾಗತಿಕ ಮಟ್ಟದಿಂದ ಹಿಡಿದು, ರಾಷ್ಟ್ರೀಯ ಮತ್ತು ಸ್ಥಳೀಯ ಮಟ್ಟದ ವರೆಗೂ ಕಳೆದ 2016 ಬಹಳಷ್ಟು ಪರಿಣಾಮಗಳನ್ನು ಬೀರಿದ ವರ್ಷವಾಗಿತ್ತು. ಕಳೆದ ವರ್ಷದ ಹಲವಾರು ಆವಿಷ್ಕಾರಗಳು, ಸಂಶೋಧನೆಗಳು ಮತ್ತು ಯಶಸ್ವಿಯಾದ ಸಾಧನೆಗಳು ಒಟ್ಟಾರೆಯಾಗಿ ಮನುಕುಲದ ಅಭಿವೃದ್ಧಿಯ ಪಥದತ್ತ ಸಾಗಲು ಇಟ್ಟಿರುವ ಒಂದು ಪುಟ್ಟ ಹೆಜ್ಜೆಯಾಗಿತ್ತು. ಇಂತಹ ಒಂದೊಂದೇ ಪುಟ್ಟ ಹೆಜ್ಜೆಗಳು ಹಲವಾರು ತಲೆಮಾರುಗಳ ನಂತರ ಮಾನವನ ಲೌಕಿಕ ಮತ್ತು ಅಂತರ್ಯದ ವಿಕಾಸವನ್ನು ಬಿಂಬಿಸುವ ಚಿತ್ರವಾಗಿ ಮೂಡುತ್ತವೆ. ಆದಿಯಿಂದ ಅನಂತದತ್ತ ಸಾಗುತ್ತಿರುವ ಕಾಲಮಾನದ ಒಂದು ಅಲ್ಪಕ್ಷಣದಷ್ಟು ಮಾತ್ರ ಈ ಜಗತ್ತಿನಲ್ಲಿರುವ ನಮ್ಮ ಕೃತಿ ಕರ್ಮಗಳು ವರ್ತಮಾನದ ಮತ್ತು ಭವಿಷ್ಯದ ಮೇಲೆ ಬೀರುವ ಪರಿಣಾಮ ಅದೆಂತಹದ್ದು ಎಂದು ಯೋಚಿಸುವ ಘಳಿಗೆಯೇ ವರ್ಷದ ಕ್ಯಾಲೆಂಡರ್ ಬದಲಿಸುವ ಹೊಸ ವರ್ಷದ ಮೊದಲ ದಿನವಾಗಿರುತ್ತದೆ. ಕಳೆದ ದಿನಗಳ ಸಾಧನೆಗಳ ಸ್ಫೂರ್ತಿಯು ಮುಂದಿನ ದಿನಗಳಲ್ಲಿ ನಾವು ಹೊಸ ಭರವಸೆ ಮತ್ತು ಆಕಾಂಕ್ಷೆಗಳನ್ನು ಕಾಣಲು ಅನುವು ಮಾಡಿಕೊಡುತ್ತದೆ. ಜತೆಗೆ ನಾವು ಮಾಡಿರುವ ತಪ್ಪುಗಳು ನಮಗೊಂದು ಅನುಭವವನ್ನು ಕೊಟ್ಟು ಎಚ್ಚರದಿಂದ ಮುಂದಡಿಯಿಡುವಂತೆ ಪ್ರೇರೇಪಿಸುತ್ತವೆ.

ಹೊಸವರ್ಷಕ್ಕೆ ಮುಂದಡಿಯಿಡುವ ಹೊತ್ತಿಗೆ ಕರ್ನಾಟಕವು ತೀವ್ರ ಬರಗಾಲಕ್ಕೆ ತುತ್ತಾಗಿದೆ. ಸುಮಾರು 150 ತಾಲೂಕುಗಳು ಕ್ಷಾಮಪೀಡಿತವಾಗಿವೆ. ಬೇಸಿಗೆ ಬರುವುದಕ್ಕಿಂತ ಮುಂಚೆಯೇ ಕೆರೆಗಳು, ಜಲಾಶಯಗಳು ಬರಿದಾಗಿವೆ. ಇಂತಹ ಸಂದರ್ಭಗಳಲ್ಲಿ ಅಧಿಕ ಬವಣೆಗೆ ಒಳಗಾಗುವವರು ಸಣ್ಣ ಹಿಡುವಳಿದಾರರು ಮತ್ತು ಹಳ್ಳಿಗಳಲ್ಲಿರುವ ಬಡ ಕೃಷಿ ಕಾರ್ಮಿಕರು. ರಾಜ್ಯದ ಮುಖ್ಯಮಂತ್ರಿ ಮತ್ತು ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಕೇಂದ್ರ ಸರಕಾರದ ನೆರವನ್ನು ಕೇಳಿ ಅಲ್ಪ ಪ್ರಮಾಣದ ಬರ ಪರಿಹಾರ ನಿಧಿಯನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಆದರೂ ಎಲ್ಲಾ ಬರಪೀಡಿತ ಜನರ ಬವಣೆಗಳನ್ನು ನೀಗಿಸುವಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರಗಳೆರಡೂ ಯುದ್ಧೋಪಾದಿಯಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅತ್ಯುತ್ತಮವಾದ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ಪಡೆದು ದೇಶದಲ್ಲಿಯೇ ತೀವ್ರವೇಗದಲ್ಲಿ ಅಭಿವೃದ್ಧಿಹೊಂದುತ್ತಿರುವ ರಾಜ್ಯವಾಗಿರುವ ಕರ್ನಾಟಕವು ಭೀಕರ ಬರದ ಪರಿಣಾಮವಾಗಿ ಮುಂದಿನ ವರ್ಷಗಳಲ್ಲಿ ಹಿನ್ನಡೆಯನ್ನು ಸಾಧಿಸಬಹುದು. ಈ ನಿಟ್ಟಿನಲ್ಲಿ ರಾಜ್ಯಕ್ಕೆ ಕೇಂದ್ರ ಸರಕಾರದಿಂದ ಮತ್ತು ವಿವಿಧ ಅಂತರಾಷ್ಟ್ರೀಯ ಸಂಸ್ಥೆಗಳಿಂದ ಆರ್ಥಿಕ ಸಂಪನ್ಮೂಲವು ನಿರಾಂತಕವಾಗಿ ಹರಿದು ಬರುವಂತಹ ಕೆಲಸಗಳನ್ನು ಸರಕಾರಗಳು ಮತ್ತು ಸರಕಾರೇತರ ಸಂಸ್ಥೆಗಳು ಮತ್ತು ವ್ಯಕ್ತಿಗಳು ಮಾಡಬೇಕಾಗಿದೆ. ಹೊರನಾಡಿನಲ್ಲಿರುವ ಪ್ರಭಾವಶಾಲಿ ಕನ್ನಡಿಗರು ತಮ್ಮ ನಾಡು ಸಂಕಷ್ಟದಲ್ಲಿರುವಾಗ ಸಹಾಯ ಮಾಡುವುದು ಅವಶ್ಯಕವಾಗಿದೆ.

ದೆಹಲಿ ಕರ್ನಾಟಕ ಸಂಘವು ಕನ್ನಡ ಸಂಸ್ಕೃತಿ, ಭಾಷೆ, ನೆಲಜಲಕ್ಕೆ ಸಂಬಂಧಿಸಿದಂತೆ ನಿರಂತರವಾಗಿ ಹಲವಾರು ಕಾರ್ಯಕ್ರಮಗಳ ಮೂಲಕ ತನ್ನನ್ನು ತಾನು ತೊಡಗಿಸಿಕೊಂಡಿದೆ. ಜತೆಗೆ ಸದಸ್ಯರಿಗೆಲ್ಲರಿಗೂ ಅವರವರ ಪ್ರತಿಭೆಗಳನ್ನು ಪ್ರದರ್ಶಿಸಲು ಹಲವು ವೇದಿಕೆಗಳನ್ನು ದೊರಕಿಸಿ ಪ್ರೋತ್ಸಾಹಿಸುತ್ತಲೂ ಇದೆ. ನಾಡಿನ ಪ್ರತಿಭಾವಂತ ಕಲಾವಿದರು ಕೂಡಾ ರಾಷ್ಟ್ರರಾಜಧಾನಿಯಲ್ಲಿ ತಮ್ಮ ಕಲೆಗಳನ್ನು ಪ್ರದರ್ಶಿಸುವ ಅಪೂರ್ವವಾದ ಅವಕಾಶಗಳನ್ನು ಕೂಡ ರಾಜ್ಯ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಪಡೆಯುತ್ತಿದ್ದಾರೆ. ಇಂತಹ ಅವಕಾಶವನ್ನು ಪಡೆದು ರಾಜ್ಯದ ಸುಮಾರು ನೂರಕ್ಕೂ ಅಧಿಕ ಜಾನಪದ ಕಲಾವಿದರು ಕಳೆದ ನವಂಬರ್‌ನಲ್ಲಿ ನವದೆಹಲಿಯಲ್ಲಿ ಹೊರನಾಡಿನ ಜನರಿಗೆ ಕನ್ನಡದ ಕಂಪನ್ನು ಉಣಬಡಿಸಿದ್ದಾರೆ. ಅದೇ ರೀತಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಪೀಠವೂ ಕನ್ನಡೇತರರಿಗೆ ಕನ್ನಡದ ಸಮೃದ್ಧ ಸಂಸ್ಕೃತಿಯನ್ನು ಹಂಚುವ ಕೆಲಸ ಮಾಡುತ್ತಿದೆ. ದೆಹಲಿ ಕರ್ನಾಟಕ ಸಂಘವು ತನ್ನ ಸದಸ್ಯರ ಮೂಲಕ ಕನ್ನಡದ ಪರಿಧಿಯಾಚೆಗೆ ಕನ್ನಡ ಸಂಸ್ಕೃತಿ ಮತ್ತು ಪರಂಪರೆಯನ್ನು ತಲುಪಿಸುವಲ್ಲಿ ಹೊಸ ಯೋಜನೆಗಳನ್ನು ಹೊಸವರ್ಷದಲ್ಲಿ ಮಾಡುವಂತಾಗಬೇಕು. ಈ ನಿಟ್ಟಿನಲ್ಲಿ ಕಾರ್ಯಕಾರಿ ಸಮಿತಿ ಮತ್ತು ಕ್ರಿಯಾಶೀಲ ಸದಸ್ಯರು ಚಿಂತನೆ ನಡೆಸಿ ಕಾರ್ಯಕ್ರಮಗಳನ್ನು ರೂಪಿಸಬಹುದು.

ಹೊಸ ವರ್ಷದಲ್ಲಿ ಅಭಿಮತದ ಓದುಗರು ಮತ್ತು ಬರಹಗಾರರು ಇನ್ನಷ್ಟು ಹೆಚ್ಚಿನ ಮಟ್ಟದಲ್ಲಿ ಸಂಘದ ಪತ್ರಿಕೆಯ ಜತೆ ಪಾಲ್ಗೊಳ್ಳುವಿರಿ ಎಂಬ ಭರವಸೆಯೊಂದಿಗೆ ಮತ್ತೊಮ್ಮೆ ನಿಮಗೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

*ಬಾಲಕೃಷ್ಣ ನಾಯ್ಕ್ ಡಿ.*

# ಯಕ್ಷಗಾನ ಪ್ರಸಂಗಗಳನ್ನು ಸಾಹಿತ್ಯ ಕೃತಿಗಳೆಂದು ಪರಿಗಣಿಸಲು ಒತ್ತಾಯ

# ಸಂಘದಲ್ಲಿ ಯಕ್ಷಗಾನ ವಿಚಾರ ಗೋಷ್ಠಿ

ಕರ್ನಾಟಕದ ಕರಾವಳಿಯ ಕಲೆ ಯಕ್ಷಗಾನ. ಇದರ ಪ್ರಸಂಗ ಕೃತಿಯನ್ನು ಮತ್ತು ಪ್ರಸಂಗಗಳನ್ನು ಕರ್ನಾಟಕ ಸರ್ಕಾರದ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಸಾಹಿತ್ಯ ಪರಿಷತ್ತು ಇತರ ಸಾಹಿತ್ಯ ಪ್ರಕಾರಗಳ ಜೊತೆಗೆ ಸಾಹಿತ್ಯ ಕೃತಿ ಎಂದು ಗುರುತಿಸಬೇಕು ಹಾಗೂ ಪ್ರಸಂಗಕರ್ತರನ್ನು ಕವಿಗಳೆಂದು ಗೌರವಿಸಬೇಕು ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಅಭಿಪ್ರಾಯಪಟ್ಟರು. ಅವರು ದೆಹಲಿ ಕರ್ನಾಟಕ ಸಂಘ ಹಾಗೂ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಜೊತೆಯಾಗಿ ಡಿಸೆಂಬರ್ 10 ಮತ್ತು 11ರಂದು ಆಯೋಜಿಸಿದ ಎರಡು ದಿನಗಳ ವಿಚಾರ ಗೋಷ್ಠಿ, ತಾಳಮದ್ದಳೆ, ಯಕ್ಷನಾಟ್ಯ ವೈಭವ ಹಾಗೂ ಯಕ್ಷಗಾನ ಮತ್ತು ಬಯಲಾಟ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ.ಎಸ್. ಮುತ್ತಯ್ಯನವರು 'ಬಯಲಾಟ ಮತ್ತು ಕಾಲಮಿತಿ' ಕುರಿತಾಗಿ ಮಾತಾನಾಡುತ್ತಾ ಸಾಕಷ್ಟು ಪೋಷಕರು ಇಲ್ಲದ ಕಾರಣ ಹಾಗೂ ವಿವಿಧ ಆಧುನಿಕ ಮನೋರಂಜನಾ ಮಾಧ್ಯಮಗಳ ಹಾವಳಿಯಿಂದಾಗಿ ಬಯಲಾಟವನ್ನು ಇಂದು ಅನಿವಾರ್ಯವಾಗಿ ಕಾಲಮಿತಿಗೆ ಅಳವಡಿಸಿಕೊಳ್ಳಬೇಕಾಗಿದೆ ಎಂದು ನುಡಿದರು.

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯರಾದ ಶ್ರೀ ಕೆ.ಎಂ. ಶೇಖರ್ ಅವರು 'ಯಕ್ಷಗಾನ ಕಾಲಮಿತಿ' ಕುರಿತಾಗಿ ಮಾತನಾಡುತ್ತ ಹಳ್ಳಿ ಪ್ರದೇಶಗಳಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಯಕ್ಷಗಾನ, ಕಾಲಮಿತಿ ಪ್ರಯೋಗಗಳಿಗೆ ಯಶಸ್ವಿಯಾಗಿ ಮಾರ್ಪಾಡಾಗಿದೆ. ಕರ್ನಾಟಕದ ಜನತೆ ಹೊಸ ಪ್ರಯೋಗಗಳನ್ನು ಸದಾ ಸ್ವಾಗತಿಸಿದ್ದಾರೆ. ಇದೇ ರೀತಿಯಲ್ಲಿ ಬಯಲಾಟವನ್ನು ಸಹ ಯಶಸ್ವಿಯಾಗಿ ಕಾಲಮಿತಿ ಪ್ರಯೋಗಕ್ಕೆ ಅಳವಡಿಸಿದರೆ ಬಯಲಾಟಗಳು ಕೂಡಾ ಯಕ್ಷಗಾನದಷ್ಟೇ ಯಶಸ್ವಿಯಾಗಿ ನಡೆಯುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಸದಸ್ಯ ಹಾಗೂ ಯಕ್ಷಗಾನ ಮೇಳಗಳ ಸಂಘಟಕ ಶ್ರೀ ಪಿ. ಕಿಶನ್ ಹೆಗ್ಡೆ ಅವರು ಮಾತನಾಡುತ್ತ ಹಳ್ಳಿ ಪ್ರದೇಶಗಳಲ್ಲಿ ದೇವಸ್ಥಾನಗಳು ಹಾಗೂ ಜನರ ಸಂಸ್ಕೃತಿಯ ಕಾರಣಕ್ಕಾಗಿ ಇಂದಿಗೂ ಕೂಡಾ ಸಂಪೂರ್ಣ ರಾತ್ರಿ ಯಕ್ಷಗಾನಗಳು ಯಶಸ್ವಿಯಾಗಿ ನಡೆಯುತ್ತಿವೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರಾದ ನಾಡೋಜ ಶ್ರೀ ಬೆಳಗಲ್ಲು ವೀರಣ್ಣನವರು ಮಾತನಾಡುತ್ತಾ ಯಕ್ಷಗಾನಕ್ಕೆ ದೊರೆತಂತಹ ಪೋಷಕರಾಗಲಿ, ಸಂಶೋಧಕ ವಿದ್ವಾಂಸರಾಗಲಿ, ಮತ್ತು ಪ್ರತಿಭಾವಂತ ಪ್ರೇಕ್ಷಕರಾಗಲಿ ಬಯಲಾಟಕ್ಕೆ ದೊರೆಯದಿರುವುದು ಅತ್ಯಂತ ನೋವಿನ ವಿಚಾರ. ಕರ್ನಾಟಕದ ಎಲ್ಲಾ ಜನತೆ ಯಕ್ಷಗಾನವನ್ನು ಪ್ರೋತ್ಸಾಹಿಸಿ ಬೆಳೆಸಿದಂತೆ ಬಯಲಾಟವನ್ನೂ ಸಹ ಪ್ರೀತಿಯಿಂದ ಪ್ರೋತ್ಸಾಹಿಸಿ ಬೆಳೆಸಬೇಕು ಎಂದು ಕರೆ ಕೊಟ್ಟರು. ಕರ್ನಾಟಕದ ಹೆಮ್ಮೆಯ ಕಲೆ ಯಕ್ಷಗಾನವನ್ನು ರಾಷ್ಟ್ರೀಯ ಕಲೆ ಎಂದು ಪರಿಗಣಿಸಬೇಕೆಂದು ಅಭಿಪ್ರಾಯಪಟ್ಟರು.

ಯಕ್ಷಗಾನ ಮತ್ತು ಬಯಲಾಟಗಳ ಕುರಿತಾಗಿ ನಡೆದ ವಿಚಾರ ಗೋಷ್ಠಿಯಲ್ಲಿ ಸಭಿಕರು ಅರ್ಥಗರ್ಭಿತವಾದ ಚರ್ಚೆಯನ್ನು ನಡೆಸಿ ಯಕ್ಷಗಾನ ಮತ್ತು ಬಯಲಾಟ ಎರಡೂ ಪ್ರಕಾರಗಳನ್ನು ಬೆಳೆಸಿ ಉಳಿಸಲು ಸರ್ಕಾರ, ಅಕಾಡೆಮಿಗಳು, ಸಂಶೋಧಕರು ಮತ್ತು ವಿದ್ವಾಂಸರು, ವಿಶ್ವವಿದ್ಯಾನಿಲಯಗಳು, ಪೋಷಕರು ಮತ್ತು ಪ್ರೇಕ್ಷಕರು ಎಲ್ಲರೂ ಒಗ್ಗಟ್ಟಿನಿಂದ ದುಡಿಯಬೇಕಾದ ಅನಿವಾರ್ಯತೆಯನ್ನು ಎತ್ತಿ ತೋರಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಎಸ್. ಎಚ್. ಶಿವರುದ್ರಪ್ಪ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮವನ್ನು ಸಂಘದ ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಧನ್ಯವಾದ ಅರ್ಪಿಸಿದರು.

ಸಭಾ ಕಾರ್ಯಕ್ರಮದ ನಂತರ ಸೃಷ್ಟಿ ಸುರತ್ಕಲ್ ತಂಡದವರಿಂದ ಯಕ್ಷಗಾನ ತಾಳಮದ್ದಳೆ ಮತ್ತು 'ಜಯಂತ ಸುಷಮೆ' ಯಕ್ಷಗಾನ ನಾಟ್ಯ ವೈಭವ ಪ್ರದರ್ಶನಗೊಂಡಿತು. ಕು. ಕಾವ್ಯಶ್ರೀ ಆಜೇರು ಅವರ ಸುಶ್ರಾವ್ಯವಾದ ಭಾಗವತಿಕೆ ಸುಷ್ಮಾ ಮೈರ್ಪಾಡಿ ಮತ್ತು ಶಿವಾನಿ ಸುರತ್ಕಲ್ ಅವರ ನೃತ್ಯ ನೆರೆದ ಸಭಿಕರನ್ನು ರಂಜಿಸಿತು.

ಡಿಸೆಂಬರ್ 11ರಂದು ಶ್ರೀ ಮಹಾಗಣಪತಿ ಮಹಿಳಾ ಮತ್ತು ಯಕ್ಷಗಾನ ಮಂಡಳಿ, ಕಾಟಿಪಳ್ಳ ತಂಡದ ಕಲಾವಿದರಿಂದ ತೆಂಕುತಿಟ್ಟು ಯಕ್ಷಗಾನ 'ಮಹಿಷ ಮರ್ದಿನಿ' ಮತ್ತು ಕಂಪಳ ರಂಗ ಸಾಂಸ್ಕೃತಿಕ ಕಲಾ ಸಂಘ, ಚಳ್ಳಕೆರೆ, ಚಿತ್ರದುರ್ಗ ಕಲಾವಿದರಿಂದ 'ಕರಿಭಂಟನ ಕಾಳಗ' ಬಯಲಾಟ ಕಾರ್ಯಕ್ರಮವು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷ ನಾಡೋಜ ಬೆಳಗಲ್ಲು ವೀರಣ್ಣ ಮತ್ತು ಸಾಹಿತಿ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರು ಕಲಾವಿದರುಗಳಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

ಕಾರ್ಯಕ್ರಮವನ್ನು ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಅವರು ನಿರೂಪಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಸಿ. ಮಠದ ವಂದಿಸಿದರು

**ಸಖಾರಾಮ ಉಪ್ಪೂರು**











# ‘ದೆಹಲಿಯ ಕನ್ನಡ ಜಗತ್ತಿನಲ್ಲಿ’ ಕೃತಿ ಬಿಡುಗಡೆ



ಡಾ. ವೈ. ಅವನೀಂದ್ರನಾಥ ರಾವ್ ಅವರ ‘ದೆಹಲಿಯ ಕನ್ನಡ ಜಗತ್ತಿನಲ್ಲಿ’ ಕೃತಿಯನ್ನು ದೆಹಲಿ ವಿಶ್ವವಿದ್ಯಾಲಯ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ಟಿ.ಎಸ್. ಸತ್ಯನಾಥ್ ಅವರು ದೆಹಲಿ ಕರ್ನಾಟಕ ಸಂಘದಲ್ಲಿ 2017ರ ಜನವರಿ 1ರಂದು ಬಿಡುಗಡೆ ಮಾಡಿದರು.

ಕೃತಿ ಬಿಡುಗಡೆ ಮಾಡಿ ಮಾತನಾಡಿದ ಡಾ. ಟಿ.ಎಸ್. ಸತ್ಯನಾಥ್ ಅವರು ದೆಹಲಿಯ ಕನ್ನಡ ಜಗತ್ತಿನಲ್ಲಿ ಕೃತಿ ದೆಹಲಿಯ ಕನ್ನಡ ಸಾಂಸ್ಕೃತಿಕ ಜೀವನದ ಮೇಲೆ ಬೆಳಕು ಚೆಲ್ಲುವ ಒಂದು ಒಳ್ಳೆಯ ಪ್ರಯತ್ನವಾಗಿದೆ, ಆದರೆ ಇಲ್ಲಿ ಬರುವ ವ್ಯಕ್ತಿ ಪರಿಚಯಗಳೇ ಆಗಲಿ, ಅಥವಾ ದೆಹಲಿ ಕರ್ನಾಟಕ ಸಂಘದ ವಿವರಣೆಯೇ ಆಗಲಿ ಕೇವಲ ಒಂದು ಪಕ್ಷಿನೋಟವನ್ನು ನೀಡುತ್ತದೆಯೇ ಹೊರತಾಗಿ ಒಂದು ಗಂಭೀರ ಸಂಶೋಧನಾತ್ಮಕ ಲೇಖನದ ರೂಪದಲ್ಲಿ ಮೂಡಿಬರುವಲ್ಲಿ ವಿಫಲವಾಗಿದೆ. ಈ ಲೇಖನಗಳನ್ನು ಆಧಾರವಾಗಿಟ್ಟುಕೊಂಡು ವಿಸ್ತಾರವಾದ ಸಂಶೋಧನೆಯ ಮೂಲಕ ದೆಹಲಿಯ ಕನ್ನಡಕ್ಕಾಗಿ ಕೆಲಸ ಮಾಡಿದ ವ್ಯಕ್ತಿಗಳು ಮತ್ತು ಕನ್ನಡ ಸಂಘ ಸಂಸ್ಥೆಗಳನ್ನು ಸಮಸ್ತ ಕನ್ನಡಿಗರಿಗೆ ಪರಿಚಯಿಸುವ ಅಗತ್ಯವಿದೆ ಎಂದರು.

ಲೇಖಕ ಡಾ. ಅವನೀಂದ್ರನಾಥ್ ರಾವ್ ಅವರು ಮಾತನಾಡಿ ನಾನು ದೆಹಲಿಯಲ್ಲಿ ಕಂಡು ಅನುಭವಿಸಿದ ಕನ್ನಡದ ಕೆಲವು ವಿಶೇಷ ವ್ಯಕ್ತಿತ್ವ ಮತ್ತು ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಇಲ್ಲಿ ಪರಿಚಯಿಸುವ ಸಣ್ಣ ಪ್ರಯತ್ನ ಮಾಡಿದ್ದೇನೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ ಆರಂಭದಿಂದ ಇಂದಿನವರೆಗೆ ಬೆಳೆದುಬಂದ ಕುರಿತಾಗಿ ಗಂಭೀರವಾದ ಸಂಶೋಧನೆಯಾಗಬೇಕಾಗಿದೆ. ಕೇವಲ ಪ್ರಸಕ್ತ ವಿಷಯಗಳನ್ನು ನಾವು ಜನರಿಗೆ ನೀಡಿದಾಗ ಸಂಘಕ್ಕೆ ಆರಂಭದಿಂದ ಇಂದಿನವರೆಗೆ ದುಡಿದವರನ್ನು ಕಡೆಗಣಿಸಿದಂತಾಗುತ್ತದೆ. ಈ ನಿಟ್ಟಿನಲ್ಲಿ ಸಂಘದ ಕುರಿತಾಗಿ ಒಂದು ಸಂಪೂರ್ಣ ಸಂಶೋಧನಾ ಕೃತಿಯನ್ನು ಯಾರಾದರೂ ಸಿದ್ಧಪಡಿಸಲು ಮುಂದಾದಲ್ಲಿ ಸಂಘವು ಎಲ್ಲಾ ಸಹಕಾರ ನೀಡುವುದೆಂದರು.

ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಧನ್ಯವಾದ ಸಲ್ಲಿಸಿದರು. ಅ

***ಅಭಿಮತ ವರದಿ***

# ಮದ್ಯ ವರ್ಜನೆಯಿಂದ ಮಾನಸಿಕ, ಶಾರೀರಿಕ ನೆಮ್ಮದಿ

ಆಯುರ್ವೇದದ ಉಗಮ, ಜೀವನ ಶೈಲಿ, ರೋಗ ನಿರೋಧಕ ಪದ್ಧತಿಗಳು ಹಾಗೂ ಆಯುರ್ವೇದದ ಉಪಯೋಗಗಳ ಬಗ್ಗೆ ವಿವರಿಸುವ ‘ಧನ್ವಂತರಿ ಮಹಿಮೆ’ ಯಕ್ಷಗಾನ ಪ್ರಸಂಗವನ್ನು ಶ್ರೀ ಗಣೇಶ ಯಕ್ಷಗಾನ ಮಂಡಳಿ, ಉಪ್ಪಿನ ಕುದ್ರು, ಕುಂದಾಪುರ ಇವರು ದೆಹಲಿ ಕರ್ನಾಟಕ ಸಂಘದಲ್ಲಿ ಹೊಸ ವರ್ಷದ ಸಂದರ್ಭದಲ್ಲಿ ಪ್ರಸ್ತುತಪಡಿಸಿದರು.

ಡಾ. ಎಂ.ವಿ. ಹೊಳ್ಳ, ಮಾಜಿ ಸದಸ್ಯರು, ಕರ್ನಾಟಕ ಆಯುರ್ವೇದ ಹಾಗೂ ಯುನಾನಿ ವೈದ್ಯ ಮಂಡಳಿ, ಅವರು ಮಾತನಾಡಿ ಆಯುರ್ವೇದವನ್ನು ಯಕ್ಷಗಾನದಲ್ಲಿ ಅಳವಡಿಸಿರುವ ಕುರಿತು ವಿವರಿಸಿದರು. ಕರ್ನಾಟಕ ಸಂಘವು ಹೊಸ ವರ್ಷದ ಸಂದರ್ಭದಲ್ಲಿ ಇಂತಹ ಒಂದು ಕಾರ್ಯಕ್ರಮವನ್ನು ನಡೆಸುತ್ತಿರುವುದು ಶ್ಲಾಘನೀಯ ಎಂದರು. ಕಲಾವಿದರನ್ನು ಅಭಿನಂದಿಸಿ ಮಾತನಾಡಿದ ಡಾ. ಆನಂದ ಗುಡಿವಾಡ, ಮೆಡಿಕಲ್ ಸೂಪರಿಟೆಂಡೆಂಟ್, ಸಿ.ಜಿ.ಎಸ್. ಎಸ್. ಆಯುರ್ವೇದಿಕ್ ಹಾಸ್ಪಿಟಲ್ ನವದೆಹಲಿ, ಅವರು ಆಯುರ್ವೇದವನ್ನು ಯಕ್ಷಗಾನದಲ್ಲಿ ಅಳವಡಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಯಕ್ಷಗಾನದ ಮುಖಾಂತರ ದೇಶವಿಡೀ ಆಯುರ್ವೇದವನ್ನು ಪ್ರಚಾರ ಮಾಡವ ನಿಟ್ಟಿನಲ್ಲಿ ಕೇಂದ್ರ ಸರಕಾರದಿಂದ ಸಾಧ್ಯವಾಗುವ ಎಲ್ಲ ಸಹಕಾರಕ್ಕೆ ಪ್ರಯತ್ನಿಸಲಾಗುವುದು ಎಂದರು. ಇದೇ ಸಂದರ್ಭದಲ್ಲಿ ಡಾ. ಅಶೋಕ ಈಟಿ, ಚೀಫ್ ಮೆಡಿಕಲ್ ಆಫೀಸರ್, ಸಿ.ಜಿ.ಎಚ್. ಎಸ್. (ಆಯುರ್ವೇದ), ನವದೆಹಲಿ ಇವರು ಕಾರ್ಯಕ್ರಮದ ಬಗ್ಗೆ ವಿಶೇಷ ಮೆಚ್ಚುಗೆ ವ್ಯಕಪಡಿಸಿ, ಈ ಯಕ್ಷಗಾನವನ್ನು ಹಿಂದಿಗೆ ಅಳವಡಿಸಿದರೆ ಇನ್ನೂ ಹೆಚ್ಚು ಜನರನ್ನು ತಲುಪಲು ಸಹಕಾರಿಯಾದೀತು ಎಂದು ಅಭಿಪ್ರಾಯಪಟ್ಟರು

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಹೊಸ ವರ್ಷದ ಶುಭಾಶಯವನ್ನು ಕೋರಿ ಹೊಸ ವರ್ಷದ ಕಾರ್ಯಕ್ರಮವನ್ನು ಆರೋಗ್ಯದ ಕುರಿತಾಗಿ ಆಯೋಜಿಸಿದ್ದೇವೆ ಎಂದರು. ಆರೋಗ್ಯದ ಕುರಿತು ಪದ್ಮವಿಭೂಷಣ ಡಾ.ವೀರೇಂದ್ರ ಹೆಗ್ಗಡೆ ಅವರು ಹಮ್ಮಿಕೊಂಡಿರುವ ಮದ್ಯ ವರ್ಜನ ಕಾರ್ಯಕ್ರಮಕ್ಕೆ ಕೈಜೋಡಿಸಬೇಕೆಂದರು. ಮದ್ಯಪಾನ ಮತ್ತು ಧೂಮ್ರಪಾನವನ್ನು ತ್ಯಜಿಸುವುದರಿಂದ ಮಾನಸಿಕ, ಶಾರೀರಿಕ ನೆಮ್ಮದಿಯ ಜೊತೆಗೆ ಮನೆಯೊಳಗಡೆ ನೆಮ್ಮದಿಯ ವಾತಾವರಣ ಉಂಟಾಗುವುದಲ್ಲದೇ ಈ ಮೂಲಕ ದೇಶದ ನೆಮ್ಮದಿಯನ್ನು ನಾವು ಕಾಪಾಡಬಹುದು ಎಂದರು. ಸಂಘದಲ್ಲಿ ಪ್ರಸ್ತುತಪಡಿಸಿದ ಯಕ್ಷಗಾನವು ಆಯುರ್ವೇದದ ಕುರಿತಾಗಿದ್ದು, ಆಯುರ್ವೇದವನ್ನು ಬಳಸುವುದರಿಂದ ನಾವೆಲ್ಲ ಆರೋಗ್ಯವಾಗಿರಲು ಸಾಧ್ಯ ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ, ನಾವು ಅದನ್ನು ಅಳವಡಿಸಿಕೊಂಡು ಆರೋಗ್ಯವಾಗಿರೋಣ ಎಂದರು. ಶ್ರೀ ಸುರೇಶ್ ಶೆಟ್ಟಿ ಅವರು ತಮ್ಮ ಸುಶ್ರಾವ್ಯ ಕಂಠದ ಭಾಗವತಿಕೆಯ ಮೂಲಕ ನೆರೆದ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದರು.

ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಅ

***ಸಖಾರಾಮ ಉಪ್ಪೂರು***



# ಎಸ್.ಎಲ್. ಭಂಡಾರ್‌ಕರ್ ಅವರ ಪುಸ್ತಕ ಬಿಡುಗಡೆ

ಡಾ. ಎಸ್.ಎಲ್. ಭಂಡಾರ್‌ಕರ್ ಅವರ ವೆಹಿಕ್ಯುಲರ್ ಪೊಲ್ಯೂಶನ್ ಆಂಡ್ ಆಲ್ಟರ್ನೇಟಿವ್ ಫ್ಯೂಯಲ್ ಎಂಬ ಕೃತಿಯನ್ನು ಕರ್ನಾಟಕದ ಮಾಜಿ ಶಾಸಕರಾದ ಶ್ರೀ ಯು.ಆರ್. ಸಭಾಪತಿ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಡಿಸೆಂಬರ್ 25ರಂದು ಬಿಡುಗಡೆಗೊಳಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಡಾ. ರಂಗನಾಥ್ ಸಿಂಗಾರಿ, ಶ್ರೀ ಎಸ್.ಎಲ್. ಭಂಡಾರ್‌ಕರ್ ಅವರು ಉಪಸ್ಥಿತರಿದ್ದರು.

ಶ್ರೀ ಸಭಾಪತಿ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ದೆಹಲಿ ಕರ್ನಾಟಕ ಸಂಘವು




ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಕಲೆ, ಕ್ರೀಡೆಗಳಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಾ ಇದೆ. ಕರ್ನಾಟಕದಿಂದ ಯಾರೇ ಬಂದರೂ ಕೂಡಾ, ಅಲ್ಲೊಂದು ದೆಹಲಿ ಕರ್ನಾಟಕ ಸಂಘ ಉಂಟು ಅಲ್ಲಿಗೆ ಹೋಗೋಣ ಎಂದು ಕರ್ನಾಟಕದ ಐದು ಕೋಟಿ ಜನರಿಗೂ ನೀವು ವಿಶ್ವಾಸವನ್ನು ಮೂಡಿಸಿದ್ದೀರಿ, ಇದು ನನಗೆ ತುಂಬಾ ಹೆಮ್ಮೆಯ ವಿಷಯ, ದೆಹಲಿ ಕರ್ನಾಟಕ ಸಂಘಕ್ಕೆ ಆಭಾರಿಯಾಗಿದ್ದೇನೆ ಎಂದರು.

ಪರಿಸರ ಮಾಲಿನ್ಯ ಅನ್ನುವುದು ಈಗ ಪ್ರತಿಯೊಂದು ರೀತಿಯಲ್ಲಿ ನಾವು ಆಲೋಚನೆ ಮಾಡಬೇಕಾದಂತ ವಿಚಾರವಾಗಿದೆ. ರಾಜ್ಯ ಸರ್ಕಾರದ ಪರಿಸರ ಮಾಲೀನ್ಯ ಇಲಾಖೆಗೆ ಸ್ವಲ್ಪ ಸಮಯ ಅಧ್ಯಯನ ಮಾಡಿದ್ದನು ನೆನೆದುಕೊಂಡರು. ಸರ್ಕಾರದ ಇಲಾಖೆಗಳು ಕೇವಲ ಹೆಸರಿಗೆ ಮಾತ್ರ ಇರುತ್ತದೆಯೋ ವಿನಃ ಪರಿಸರ ಮಾಲಿನ್ಯ ಮಾಡುತ್ತೀರಿ ಅಂತ ತೋರಿಸಿಕೊಟ್ಟು ವಸೂಲಿ ಮಾಡುವುದು ಬಿಟ್ಟು ಬೇರೆ ಯಾವ ರೀತಿಯ ಕಾರ್ಯಕ್ರಮಗಳು ಆಗುತ್ತಾ ಇಲ್ಲ ಎಂದರು.

ಪರಿಸರ ಮಾಲಿನ್ಯದಿಂದ ಜನಸಾಮಾನ್ಯರಿಗೆ ಆಗತಕ್ಕಂತಹ ಪರಿಣಾಮ ಏನೂಂತ ನೀವು ತಾಂತ್ರಿಕ ದೃಷ್ಟಿಯಿಂದ ಬರೆದಿದ್ದೀರಾ ಬಹುಶಃ ಈ ಪುಸ್ತಕವನ್ನು ಎಲ್ಲಾ ತಾಂತ್ರಿಕ ವಿಶ್ವವಿದ್ಯಾಲಯಗಳಲ್ಲಿ ಕೂಡಾ ಪಬ್ಲಿಸಿಟಿ ಮಾಡಿದರೆ ಮುಂದಿನ ಯುವ ಜನಾಂಗಕ್ಕೆ ನಾವು ಬದುಕುವ ದಾರಿ ಹೇಗೆ ಎಂಬ ಮಾಹಿತಿಯನ್ನು ಕೊಟ್ಟಂತಾಗುತ್ತದೆ ಎಂಬ ಸಂದೇಶವನ್ನು ನೀಡಿದರು ಮತ್ತು ಈ ಪುಸ್ತಕವನ್ನು ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿ ಅಳವಡಿಸಿದರೆ ಬಹುಶಃ ದೆಹಲಿ ಕರ್ನಾಟಕ ಸಂಘಕ್ಕೆ ಕೀರ್ತಿ ಬರಬಹುದೆಂದರು.

ಡಾ. ರಂಗನಾಥ್ ಸಿಂಗಾರಿ ಅವರು ಪುಸ್ತಕದ ಬಗ್ಗೆ ಮಾತನಾಡುತ್ತ ಈ ಪುಸ್ತಕವು ಸಾಮಾನ್ಯ ಜನರಿಗೂ ಅರ್ಥವಾಗುವ್ ರೀತಿಯಲ್ಲಿ ಡಾ. ಎಸ್.ಎಲ್. ಭಂಡಾರ್‌ಕರ್ ಅವರು ಬಹಳ ಚೆನ್ನಾಗಿ ಬರೆದಿದ್ದಾರೆ ಎಂದರು. ಇದನ್ನು ವಿಶ್ವವಿದ್ಯಾನಿಲಯಗಳಲ್ಲಿ ಅಟೊಮೊಬೈಲ್ ಇಂಜಿನಿಯರಿಂಗ್‌ನಲ್ಲಿ ಒಂದು ಪರ್ಟಿಕ್ಯುಲರ್ ವಿಷಯದ ಜೊತೆಗೆ ಸೇರಿಸುವ ಬಗ್ಗೆ ನಾವು ಮಾತುಕತೆ ನಡೆಸುತ್ತೇವೆ ಎಂದರು. ಡಾ. ಭಂಡಾರ್‌ಕರ್ ಅವರು ವಾಹನ ಮಾಲಿನ್ಯ ಮತ್ತು ಪರ್ಯಾಯ ಇಂಧನ ಅಂದರೆ ಡೀಸೆಲ್, ಪೆಟ್ರೋಲ್ ಬಳಸುವಂತಹ ಎಲ್ಲಾ ವಾಹನಗಳನ್ನು ಚಾಲನೆ ಮಾಡುತ್ತೇವೆ. ಡೀಸೆಲ್, ಪೆಟ್ರೋಲ್ ಬಿಟ್ಟು ಮತ್ತೆ ಯಾವ ಎನರ್ಜಿಯನ್ನು ಉಪಯೋಗಿಸಬಹುದು, ಯಾಕೆ ಬಳಸಬಹುದು ಎಂಬ ಬಗ್ಗೆ ಬಹಳ ಆಳವಾದ ಅಧ್ಯಯನವನ್ನು ಮಾಡಿದ್ದಾರೆ.

ಈ ಪುಸ್ತಕದ ವಿಶೇಷತೆ ಏನು? ಏನು ಬರೆದಿದ್ದಾರೆ? ಜನ ಸಾಮಾನ್ಯರ ಸಲುವಾಗಿಯೇ ಎಲ್ಲಾ ಅಧ್ಯಯನಗಳನ್ನು ಮಾಡಿದ್ದಾರೆ. ಇವತ್ತು ಎಲ್.ಇ.ಡಿ. ಲೈಟ್‌ಗಳು ಬಂದಿದ್ದು ಜನ ಸಾಮಾನ್ಯರ ಸಲುವಾಗಿಯೇ ಎಂದರು. ಇದು ಅಟೋಮೊಬೈಲ್ ವಿದ್ಯಾರ್ಥಿಗಳು ಅಥವಾ ಮೆಡಿಕಲ್ ಬಗ್ಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಅಥವಾ ಪರಿಸರದ ಬಗ್ಗೆ ಅಧ್ಯಯನ ಮಾಡುವಂತಹ ವಿದ್ಯಾರ್ಥಿಗಳು ಓದತಕ್ಕಂತ ಪುಸ್ತಕ ಎಂದರು.

ವಾಹನ ಮಾಲಿನ್ಯಗಳ ರೀತಿ ಅವು ಹೇಗೆ ಪರಿಸರದ ಮೇಲೆ ಪರಿಣಾಮ ಬೀರುತ್ತವೆ ಅವುಗಳಿಂದ ಇವತ್ತು ಇದರ ಬಗ್ಗೆ ಮಾಹಿತಿಗಳು ಬರುತ್ತಾ ಇದೆ. ಈ ಪುಸ್ತಕದಲ್ಲಿ ಪೆಟ್ರೋಲ್, ಡೀಸೆಲ್, ಸಿಎನ್‌ಜಿ ಬಗ್ಗೆ ಸವಿಸ್ತಾರವಾದ ಮಾಹಿತಿ ಇದೆ. ಇದರಿಂದ ಹೊರಬಹುದು ಮಾಲಿನ್ಯದ ಬಗ್ಗೆ ವಿಮರ್ಶಿಸಲಾಗಿದೆ. ಪರ್ಯಾಯ ಇಂಧನ ಸಿಎನ್‌ಜಿ ಬಗ್ಗೆ ಹೋಲಿಸಲಾಗಿದೆ. ಸಿಎನ್‌ಜಿ ಬಳಸುವುದರಿಂದ ಯಾವ ರೀತಿ ಹವಾಮಾಲೀನ್ಯವನ್ನು ಕಡಿಮೆ ಮಾಡಬಹುದು ಎಂಬ ಮಾಹಿತಿ ಇದೆ.

ಕರ್ನಾಟಕ ರಾಜ್ಯಕ್ಕೆ ಸಿಎನ್‌ಜಿಯನ್ನು ಮಹಾರಾಷ್ಟ್ರದ ದಾಬೋಲದ ಮೂಲಕ ಕೊಲ್ಹಾಪುರ, ಬೆಳಗಾಂ ಮಾರ್ಗವಾಗಿ ಬೆಂಗಳೂರಿನವರೆಗೆ ತಲುಪಿಸಿರುವ ಪ್ರಾಜೆಕ್ಟ್ ಬಗ್ಗೆ ವಿಸ್ತಾರವಾದ ಮಾಹಿತಿ ಇದೆ, ಅದಕ್ಕಾಗಿರುವ ವೆಚ್ಚ, ಎಲ್ಲಿಯವರೆಗೆ ಪ್ರಾಜೆಕ್ಟ್ ಪೂರ್ತಿಯಾಗಿದೆ, ಮನೆ ಮನೆಗೆ ನೀಡಿರುವ ಗ್ಯಾಸ್ ಕನೆಕ್ಷನ್ ಬಗ್ಗೆಯೂ ವಿಮರ್ಶಿಸಲಾಗಿದೆ. ಇದು ಕನ್ನಡಿಗನಿಂದ ದೇಶಕ್ಕೆ ಕೊಡುಗೆ ಎಂದರು.

ಭಂಡಾರ್‌ಕರ್ ಅವರು ಮಾತನಾಡುತ್ತ, ಕಲಬುರಗಿಯನ್ನು ಯಾಕೆ ಆಯ್ಕೆ ಮಾಡಿದ್ದೀರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತ, ಕರ್ನಾಟಕದಲ್ಲಿ ಬೆಂಗಳೂರು ಬಿಟ್ಟರೆ, ಕಲಬುರಗಿ ಅತ್ಯಂತ ಪರಿಸರ ಮಾಲೀನ್ಯದಿಂದ ತುಂಬಿದ ಜಾಗವಾಗಿತ್ತು. ಹಾಗಾಗಿ ನಾನು ಅದನ್ನೇ ಆಯ್ಕೆ ಮಾಡಿಕೊಂಡು ಅಲ್ಲಿರುವ ಸಿಮೆಂಟ್ ಕಾರ್ಖಾನೆ, ವಾಹನ ಮಾಲಿನ್ಯದಿಂದಾಗಿ ಹೆಚ್ಚು ಮಾಲಿನ್ಯ ಆಗುತ್ತಿದೆ ಅಂದರು. ಒಂದು ಡೀಸೆಲ್ ವಾಹನವು ಮಾಡುವ ಮಾಲಿನ್ಯವು 7 ರಿಂದ 8 ಪೆಟ್ರೋಲ್ ವಾಹನವು ನೀಡುವ ಮಾಲಿನ್ಯಕ್ಕೆ ಸರಿಯಾಗಿರುತ್ತದೆ ಎಂದರು.

ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ, ದೆಹಲಿಯಲ್ಲಿ ಐಐಟಿ, ದೆಹಲಿ ವಿಶ್ವವಿದ್ಯಾಲಯ, ಜವಾಹರಲಾಲ್ ವಿಶ್ವವಿದ್ಯಾನಿಲಯ ಹಾಗೂ ಇನ್ನಿತರ ಇಂಜಿನಿಯರಿಂಗ್ ಕಾಲೇಜುಗಳಿವೆ ಇಲ್ಲಿ ಬಹಳಷ್ಟು ಕನ್ನಡದ ಪ್ರೊಫೆಸರ್‌ಗಳಿದ್ದಾರೆ, ಮುಖ್ಯಸ್ಥರಿದ್ದಾರೆ ಇವರನ್ನೆಲ್ಲಾ ಒಟ್ಟು ಸೇರಿಸಿದರೆ ದೆಹಲಿಯಲ್ಲಿ ಸುಮಾರು ನೂರು ಜನ ವಿದ್ಯಾಕ್ಷೇತ್ರದಲ್ಲಿ ದೊಡ್ಡ ಹುದ್ದೆಯಲ್ಲಿ ಸೇವೆ ಸಲ್ಲಿಸುವವರಿದ್ದಾರೆ. ಈ ಶಿಕ್ಷಣ ತಜ್ಞರೆಲ್ಲ ಸೇರಿಕೊಂಡು ಒಂದು ಚರ್ಚೆ ಮಾಡುವುದು, ಇಲ್ಲಿದ್ದು ನಾವು ಕರ್ನಾಟಕಕ್ಕೆ ಏನು ಮಾಡಬಹುದು ಎಂದು ಚರ್ಚಿಸಬೇಕು ಎಂದರು.

ಡಾ. ಭಂಡಾರ್‌ಕರ್ ಅವರ ಇಂತಹ ಒಂದು ಕೃತಿ ಜರ್ಮನಿಯಲ್ಲಿ ಮುದ್ರಣಗೊಳ್ಳುತ್ತದೆ. ಅಲ್ಲಿ ಪಬ್ಲಿಕೇಶನ್ ಆಗುತ್ತದೆ. ತುಂಬಾ ಒಳ್ಳೆಯ ಕೃತಿಯು ಜರ್ಮನಿಯಂತಹ ಒಂದು ದೇಶದಲ್ಲಿ ಮುದ್ರಣ ಆಗಿ ಅದು ನಮ್ಮ ಕನ್ನಡಿಗರಲ್ಲ, ಭಾರತೀಯರಿಗಲ್ಲ ಇಡೀ ವಿಶ್ವದಾದ್ಯಂತ ಈ ಪುಸ್ತಕ ಎಲ್ಲರಿಗೂ ತಲುಪಲಿ ಎಂದರು.

*ಅಭಿಮತ ವರದಿ*




# ಆನಂದ ಮುರಗೋಡ ಅವರ ಹಂಪಿ ಛಾಯಾಚಿತ್ರ ಪ್ರದರ್ಶನ


'ದಿ ವೀಕ್' ಪತ್ರಿಕೆಯ ಸಂಪಾದಕ ಮತ್ತು ಖ್ಯಾತ ಅಂಕಣಕಾರ ಶ್ರೀ ಕೆ.ಎಸ್. ಸಚ್ಚಿದಾನಂದ ಮೂರ್ತಿ ಅವರು ಅಂತರರಾಷ್ಟ್ರೀಯ ಖ್ಯಾತಿಯ ದೆಹಲಿಯ ಕನ್ನಡದ ಛಾಯಾಗ್ರಾಹಕ ಶ್ರೀ ಆನಂದ ಈಶ್ವರಪ್ಪ ಮುರಗೋಡ ಅವರ 'ರಾಯಲ್ ಹಂಪಿ' ಕುರಿತ ಛಾಯಾಚಿತ್ರದ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ಆರ್ಟ್‌ಗ್ಯಾಲರಿಯಲ್ಲಿ ಜನವರಿ 1 ರಂದು ಉದ್ಘಾಟಿಸಿದರು. ಹಂಪಿಯ ಕುರಿತಾದ ವಸ್ತು ವಿಷಯವನ್ನು ಆಯ್ಕೆ ಮಾಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀ ಸಚ್ಚಿದಾನಂದ ಮೂರ್ತಿ ಅವರು ಮಾತನಾಡಿ ಶ್ರೀ ಆನಂದ ಮುರಗೋಡ ಅವರು ಒಬ್ಬ ಕ್ರಿಯಾಶೀಲ ಛಾಯಾಚಿತ್ರಗಾರ ಎಂದರು ಹಾಗೂ ಸಂಘದ ಎಲ್ಲಾ ಇಂತಹ ಉತ್ತಮ ಚಟುವಟಿಕೆಗಳನ್ನು ಶ್ಲಾಘಿಸಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ ಈ ವರ್ಷ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಕರ್ನಾಟಕದ ಗ್ರಾಮೀಣ ಕಲಾವಿದರ ಚಿತ್ರಪ್ರದರ್ಶನಗಳಿಗೆ ಹೆಚ್ಚು ಆದ್ಯತೆ ನೀಡಲಾಗುವುದು ಎಂದರು. ಸಂಘದ ಆರ್ಟ್ ಗ್ಯಾಲರಿಯನ್ನು ದೆಹಲಿಯ ಪ್ರಸಿದ್ಧ ಆರ್ಟ್ ಗ್ಯಾಲರಿಯನ್ನಾಗಿಸಲು ಕನ್ನಡದ ಕಲಾವಿದರ ಸಹಕಾರ ಅತೀ ಅಗತ್ಯ ಎಂದರು. ಅ



**ಅಭಿಮತ ವರದಿ**


## ಅಭಿನಂದನೆ



### ಬೊಳುವಾರು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ಕನ್ನಡದ ಹಿರಿಯ ಸಾಹಿತಿ ಬೊಳುವಾರು ಮಹಮ್ಮದ್ ಕುಂಞ್ಞಿ ಅವರಿಗೆ 2016ನೇ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರ 'ಸ್ವಾತಂತ್ರ್ಯದ ಓಟ' ಕಾದಂಬರಿ ಈ ಪ್ರಶಸ್ತಿಗೆ ಆಯ್ಕೆಯಾಗಿದೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಬೊಳುವಾರು ಮಹಮ್ಮದ್ ಕುಂಞ್ಞಿ ಅವರು ದೆಹಲಿಯಲ್ಲಿದ್ದ ಸಂದರ್ಭದಲ್ಲಿ ಸಂಘದ ಮುಖ ಪತ್ರಿಕೆ ಅಭಿಮತಕ್ಕೂ ತಮ್ಮ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. 'ಸ್ವಾತಂತ್ರ್ಯದ ಓಟ' ಕಾದಂಬರಿಯಲ್ಲಿ ಸಂಘದ ಪ್ರಸ್ತಾವನೆಯೂ ಬರುತ್ತಿರುವುದು ಬೊಳುವಾರು ಅವರು ಸಂಘದ ಮೇಲಿಟ್ಟಿರುವ ಅಭಿಮಾನದ ಸಂಕೇತವಾಗಿದೆ. ಅ

## ಶ್ರದ್ಧಾಂಜಲಿ



### ಶ್ರೀ ಆರ್.ಎ. ಪಕ್ಕಳ ಅವರಿಗೆ ಶ್ರದ್ಧಾಂಜಲಿ

ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ಪದಾಧಿಕಾರಿಗಳು, ಸದಸ್ಯರುಗಳು ಮತ್ತು ಹಲವಾರು ಮಂದಿ ದೆಹಲಿಯ ಗಣ್ಯ ಕನ್ನಡಿಗರು ಸೇರಿ ಇತ್ತೀಚೆಗೆ ನಮ್ಮನ್ನಗಲಿದ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೂ (1990–92) ಮತ್ತು ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದ ಶ್ರೀ ಆರ್.ಎ. ಪಕ್ಕಳ ಅವರಿಗೆ ಇದೇ ಜನವರಿ 1ರಂದು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅನೇಕ ಗಣ್ಯರು ಶ್ರೀ ಪಕ್ಕಳ ಅವರು ಕರ್ನಾಟಕ ಸಂಘ ಮತ್ತು ಇನ್ನಿತರ ಸಂಘ ಸಂಸ್ಥೆಗಳಿಗೆ ಸಲ್ಲಿಸಿದ ಸೇವೆಯನ್ನು ವಿಶೇಷವಾಗಿ ಸ್ಮರಿಸಿಕೊಂಡರು. ಅ

# ಸ್ಥಳೀಯ ಕವಿಗಳ ಕವನಗಳಿಂದ ಸಂಘದಲ್ಲಿ ಹೊಸ ವರ್ಷದ ಕಾರ್ಯಕ್ರಮಗಳ ಆರಂಭ



ರಾಷ್ಟ್ರ ರಾಜಧಾನಿ ದೆಹಲಿಯ ಕರ್ನಾಟಕ ಸಂಘದಲ್ಲಿ ದೆಹಲಿಯ ಕೊರೆಯುವ ಚಳಿಗೆ ಜನವರಿ ತಿಂಗಳ 1ರಂದು ಪೂರ್ವಾಹ್ನ 3 ಗಂಟೆಗೆ ಸಂಘದ ಮೆಟ್ಟಿಲಲ್ಲಿ ಕುಳಿತು ಸ್ಥಳೀಯ ಕವಿಗಳು ಸ್ವರಚಿತ ಕನ್ನಡದ ಕವನಗಳನ್ನು ವಾಚಿಸಿದರು.

"ಸಂಘದ ಅಂಗಳದಲ್ಲಿ" ಸ್ವರಚಿತ ಕವನ ವಾಚನ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಹೊಸ ವರ್ಷದ ಸಂಘದ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ. ಸಂಘದ ಬರಹಗಾರರಿಗೆ ಪ್ರೋತ್ಸಾಹ ನೀಡುವ ಉದ್ದೇಶ ಸಂಘದ್ದಾಗಿದೆ ಎಂದು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಹೇಳಿದರು. ಕನ್ನಡ ನಾಡಿನಿಂದ ಬಹಳಷ್ಟು ದೂರದಲ್ಲಿ ನೆಲೆನಿಂತ ನಾವು ಕನ್ನಡವನ್ನು ಬರೆಯುವ ಮತ್ತು ಓದುವ ರೂಢಿಯನ್ನು ಹೆಚ್ಚಿಸಿಕೊಳ್ಳಬೇಕು, ತಪ್ಪಾದೀತೆಂದು ಬರೆಯಲು ಹಿಂಜರಿಯದಿರಿ, ತಮಗೆ ತಿಳಿದ ಹಾಗೆ ಬರೆಯಿರಿ, ಬರೆದುದನ್ನು ಸಂಘದ ಅಂಗಳ ಕಾರ್ಯಕ್ರಮದಲ್ಲಿ ಓದಿ. ನಿರಂತರವಾಗಿ ಬರೆದಾಗ ಮಾತ್ರ ಉತ್ತಮ ಬರಹಗಾರರಾಗಲು ಸಾಧ್ಯ ಎಂದು ಈ ಸಂದರ್ಭದಲ್ಲಿ ಹೇಳಿದರು.

ದೆಹಲಿಯ ಹಿರಿಯ ಕನ್ನಡತಿ ಡಾ.ಅಹಲ್ಯಾ ಚಿಂತಾಮಣಿ ಅವರು ಮಾತನಾಡಿ ಇದೊಂದು ಒಳ್ಳೆಯ ಪ್ರಯತ್ನ, ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ಹಮ್ಮಿಕೊಳ್ಳಬೇಕೆಂದರು.

ಈ ಕಾರ್ಯಕ್ರಮದಲ್ಲಿ ಕವಿಗಳಾದ ಡಾ. ಅಹಲ್ಯಾ ಚಿಂತಾಮಣಿ, ಸಖಾರಾಮ ಉಪ್ಪೂರು, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀಮತಿ ಸವಿತಾ ಇನಾಂದಾರ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀಮತಿ ಮಂಜುಳಾ ನಾಗರಾಜ್, ವಸಂತ ಶೆಟ್ಟಿ ಬೆಳ್ಳಾರೆ, ಕೆ.ಎಸ್.ಜಿ. ಶೆಟ್ಟಿ, ಡಾ. ಎಸ್. ಎಲ್. ಭಂಡಾರ್‌ಕರ್, ಡಾ. ವೈ. ಅವನೀಂದ್ರನಾಥ್ ರಾವ್, ಸಂಗಪ್ಪ ವಗ್ಗಾರ್ ಸ್ವರಚಿತ ಕವನ ವಾಚನ ಮಾಡಿದರು.

ಕೊನೆಯಲ್ಲಿ ಸಂಘದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ವಂದಿಸಿದರು. ಅ

***ಅಭಿಮತ ವರದಿ***

# ಪುಸ್ತಕಗಳನ್ನು ಕೊಂಡು ಓದುವ ಪ್ರವೃತ್ತಿ ಬೆಳೆಸಿಕೊಳ್ಳಿ

## ದೆಹಲಿ ಕರ್ನಾಟಕ ಸಂಘದಲ್ಲಿ ಡಾ.ಎಚ್.ವಿ. ಹಂದೆ ಕರೆ

ಪುಸ್ತಕಗಳನ್ನು ಓದುವ ಹವ್ಯಾಸ ನಾವು ಬೆಳೆಸಿಕೊಳ್ಳಬೇಕು, ಪುಸ್ತಕ ಓದುವುದರಿಂದ ನಮ್ಮ ಜ್ಞಾನ ವೃದ್ಧಿಯಾಗುತ್ತದೆ, ಅಲ್ಲದೇ ನಮ್ಮ ಭಾಷೆಯನ್ನು ಪರಿಪೂರ್ಣಗೊಳಿಸುವುದಕ್ಕೆ ಕೂಡಾ ಸಹಕಾರಿಯಾಗುತ್ತದೆ. ಪುಸ್ತಕಗಳನ್ನು ಓದುವುದರಿಂದ ನಮ್ಮ ನಾಡು-ನುಡಿ-ಸಂಸ್ಕೃತಿ, ಆಚಾರ-ವಿಚಾರಗಳನ್ನು ಕೂಡಾ ತಿಳಿದುಕೊಳ್ಳಬಹುದು. ಯಾವುದೇ ಪುಸ್ತಕಗಳಿರಲಿ ಅದನ್ನು ಕೊಂಡು ಓದುವ ಪ್ರವೃತ್ತಿ ನಮ್ಮದಾಗಬೇಕು, ಆ ಮೂಲಕ ನಾವು ಬರಹಗಾರರನ್ನು ಪ್ರೋತ್ಸಾಹಿಸಿದಂತಾಗುತ್ತದೆ. ರಾಜಧಾನಿ ದೆಹಲಿಯಲ್ಲಿ, ದೆಹಲಿ ಕರ್ನಾಟಕ ಸಂಘವು ಕರ್ನಾಟಕದ ರಾಯಭಾರಿಯಂತೆ ಉತ್ತಮ ಕೆಲಸಗಳನ್ನು ಮಾಡುತ್ತಿದ್ದು ಪುಸ್ತಕಗಳನ್ನು ಪ್ರಕಟಿಸುತ್ತಿರುವುದು ಶ್ಲಾಘನೀಯ ಎಂದು ತಮಿಳುನಾಡಿನ ಮಾಜಿ ಸಚಿವ, ಹಿರಿಯ ಕನ್ನಡಿಗ ಡಾ. ಎಚ್.ವಿ. ಹಂದೆಯವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘವು ಡಿಸೆಂಬರ್ 25ರಂದು ಹಮ್ಮಿಕೊಂಡಿದ್ದ "ಪುಸ್ತಕ ಕೊಂಡು ಓದಿ ಅಭಿಯಾನ"ನ್ನು ಆರಂಭಿಸಿ ಮಾತನಾಡುತ್ತಿದ್ದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡಿ ಸಂಘವು ಹಲವು ಕೃತಿಗಳನ್ನು ಈಗಾಗಲೇ ಪ್ರಕಟಿಸಿದೆ. ಇದನ್ನು ಕನ್ನಡಿಗರು ಕೊಂಡು ಓದುವ ಮೂಲಕ ಹೊರನಾಡ ಕನ್ನಡಿಗರ ಸಾಹಿತ್ಯ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಹಮ್ಮಿಕೊಳ್ಳಲಾಗಿದೆ ಎಂದರು. ಮುಂದಿನ ದಿನಗಳಲ್ಲಿ ಇನ್ನಷ್ಟು ಪುಸ್ತಕಗಳನ್ನು ಪ್ರಕಟಿಸಲು ಸಂಘ ನಿರ್ಧರಿಸಿದೆ ಎಂದು ಈ ಸಂದರ್ಭದಲ್ಲಿ ನುಡಿದರು.

ಕಾರ್ಯಕ್ರಮವನ್ನು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ನಿರ್ವಹಿಸಿ ವಂದಿಸಿದರು. ಅ

***ಅಭಿಮತ ವರದಿ***





# ಡಾ. ಹೆಚ್.ವಿ. ಹಂದೆ ಅವರೊಡನೆ ಸಂದರ್ಶನ

ತಮಿಳುನಾಡು ಸರ್ಕಾರದಲ್ಲಿ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದ ಮತ್ತು 'ಕಂಬರಾಮಾಯಣ'ವನ್ನು ಇಂಗ್ಲಿಷಿಗೆ ಅನುವಾದಿಸಿರುವ **ಡಾ. ಎಚ್.ವಿ. ಹಂದೆ** ಅವರು ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ್ದರು. ಮೂಲತಃ ಕರ್ನಾಟಕದವರಾದ ಇವರು ತಮಿಳುನಾಡಿನಲ್ಲಿ ನೆಲೆನಿಂತಿದ್ದಾರೆ. ಡಾ. ಎಚ್.ವಿ. ಹಂದೆ ಅವರೊಂದಿಗೆ ಸಂಘದ ಅಧ್ಯಕ್ಷರಾದ **ಶ್ರೀ ವಸಂತ ಶೆಟ್ಟಿ ಬೆಳ್ಳಾರೆ** ಅವರು ಅಭಿಮತಕ್ಕಾಗಿ ವಿಶೇಷವಾಗಿ ಸಂದರ್ಶಿಸಿದರು. ಸಂದರ್ಶನದ ಆಯ್ದಭಾಗವನ್ನು ಅಭಿಮತದ ಓದುಗರಿಗೆ ನೀಡುತ್ತಿದ್ದೇವೆ.

**ಮೂಲತ: ಕರ್ನಾಟಕದವರಾದ ನೀವು ತಮಿಳುನಾಡಿನ ಚೆನ್ನೈನಲ್ಲಿ ನೆಲೆನಿಂತು ವೈದ್ಯಕೀಯ ವೃತ್ತಿಯ ಮೂಲಕ ಜೊತೆಗೆ ಸಮಾಜ ಸೇವೆಗೆ ತೊಡಗಿಸಿಕೊಂಡವರು. ಚೆನ್ನೈಗೆ ಹೋಗಿ ನೆಲೆ ನಿಂತು ಬಹಳಷ್ಟು ಸಾಧಿಸಿದ್ದೀರಿ. ಇದೆಲ್ಲ ನಿಮಗೆ ಹೇಗೆ ಸಾಧ್ಯವಾಯಿತು?**

ನಾನು 1945ನೇ ಇಸವಿಯಲ್ಲಿ ನನ್ನ ಇಂಟರ್‌ಮೀಡಿಯೇಟ್‌ನ್ನು ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಮುಗಿಸಿದೆ. ಅನಂತರ ಚೆನ್ನೈನ 'ಕಿಲ್ಪಾರ್ಕ್' ಮೆಡಿಕಲ್ ಕಾಲೇಜಿನಲ್ಲಿ ನನ್ನ ವೈದ್ಯಕೀಯ ವಿದ್ಯಾಭ್ಯಾಸ ಪೂರೈಸಿದೆ. ಆಗ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಮಲಬಾರ್ ಪ್ರದೇಶಗಳು ಅಂದಿನ ಮದ್ರಾಸ್ ಪ್ರೆಸಿಡೆನ್ಸಿಯ ಆಡಳಿತಕ್ಕೊಳಪಟ್ಟಿದ್ದವು. ಹಾಗಾಗಿ 1950ರಲ್ಲಿ ಚೆನ್ನೈನಲ್ಲಿ ವೈದ್ಯಕೀಯ ವೃತ್ತಿ ಪ್ರಾರಂಭ ಮಾಡಿದೆ. ವೈದ್ಯಕೀಯ ವೃತ್ತಿ ನನ್ನ ಜೀವನದಲ್ಲಿ ಬಹಳಷ್ಟು ಸ್ನೇಹಿತರನ್ನು ತಂದುಕೊಟ್ಟಿತು. ನಾನು ಬಹಳಷ್ಟು ಕುಟುಂಬಗಳಿಗೆ ಆಪ್ತ ವೈದ್ಯನಾಗಿದ್ದೆ. ಅವರೆಲ್ಲರ ಪ್ರೋತ್ಸಾಹ ನನಗಿತ್ತು.

**ನಂತರದ ದಿನಗಳಲ್ಲಿ ರಾಜಕೀಯ ಕ್ಷೇತ್ರವನ್ನೂ ಪ್ರವೇಶಿಸಿದಿರಿ. ರಾಜಕೀಯಕ್ಕೆ ನಿಮ್ಮ ಪ್ರವೇಶ ಹೇಗಾಯಿತು?**

ತಮಿಳುನಾಡಿನಲ್ಲಿ ಪದವೀಧರರಿಗೂ ರಾಜಕೀಯ ಪ್ರಾತಿನಿಧ್ಯ ನೀಡಬೇಕೆನ್ನುವ ದೃಷ್ಟಿಯಿಂದ 1962ರಲ್ಲಿ 'ಪದವೀಧರ ಕ್ಷೇತ್ರ' ಪ್ರಾರಂಭವಾಯಿತು. ನಾನು ಒಂದು ವರ್ಷ ಬಹಳ ಕಷ್ಟಪಟ್ಟು ಪದವೀಧರರಾಗಿದ್ದವರ ಜೊತೆ ಸ್ನೇಹದ ಹಸ್ತ ಚಾಚಿ ಅವರ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸಿದೆ. ನನಗೆ ಪ್ರಾರಂಭದಿಂದಲೂ ಬಡವರಿಗೆ ಸಹಾಯ ಮಾಡಬೇಕೆನ್ನುವ ಆಸೆ ಬಹಳವಾಗಿತ್ತು. ಹಾಗಾಗಿ ನಾನು ಪದವೀಧರ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದು ಎಂ.ಎಲ್.ಸಿ. ಆಗಿ ಚುನಾಯಿತನಾದೆ. ಅಂದಿನ ಕಾಲದಲ್ಲಿ ಹಿರಿಯ ಮುಖಂಡರಾದ ಎ.ಸಿ. ಮೊದಲಿಯಾರ್, ಚೆರಿಯನ್ ಅವರು ಕೂಡ ಪದವೀಧರ ಕ್ಷೇತ್ರದಿಂದಲೇ ಸ್ಪರ್ಧಿಸಿ, ಆಯ್ಕೆಯಾಗಿ ಬರುತ್ತಿದ್ದವರು.

**ಎಂ.ಎಲ್.ಸಿ. ಆಗಿ ಪದವೀಧರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ನಿಮಗೆ ವಿಧಾನ ಸಭೆ ಚುನಾವಣೆಗೆ ಸ್ಪರ್ಧಿಸುವ ಅವಕಾಶ ದೊರಕಿದ್ದು ಹೇಗೆ? ಅಲ್ಲದೆ ಆಗಿನ ತಮಿಳುನಾಡು ಸರಕಾರದಲ್ಲಿ ಎಂ.ಜಿ.ಆರ್. ನಂತರದ ಎರಡನೇ ಪ್ರಬಲ ಹಾಗೂ ಪ್ರಭಾವಿ ವ್ಯಕ್ತಿಯಾಗಿ ಗುರುತಿಸಲ್ಪಟ್ಟಿದ್ದಿರಿ ಅನ್ನೋದೇ ನಮಗೆ ಕುತೂಹಲದ ಸಂಗತಿ. ಈ ಬಗ್ಗೆ ಏನು ಹೇಳಲಿಕ್ಕೆ ಇಷ್ಟ ಪಡ್ತೀರಿ?**

ಆಗ ರಾಜಾಜಿಯವರ 'ಸ್ವತಂತ್ರ ಪಕ್ಷ' ಇತ್ತು, ಕಾಮರಾಜರು ಮತ್ತು ರಾಜಾಜಿಯವರು ನನಗೆ ಕರೆ ಕಳುಹಿಸಿ ಭೇಟಿ ಮಾಡಲು ಸೂಚಿಸಿದರು. ಆಗ ಎ.ಡಿ.ಎಂ.ಕೆ. ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಬಹಳ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ 'ಸ್ವತಂತ್ರ ಪಾರ್ಟಿ' ಆಗ ವಿರೋಧ ಪಕ್ಷದ ಸ್ಥಾನದಲ್ಲಿತ್ತು. 1967ರಲ್ಲಿ ಜನರಲ್‌ಎಲೆಕ್ಷನ್ ಬಂತು, ಅಷ್ಟರ ವೇಳೆಗಾಗಲೇ ನಾನು ಬಹಳಷ್ಟು ಜನೋಪಕಾರಿ ಕೆಲಸಗಳನ್ನ ಮಾಡುವುದರ ಮೂಲಕ ಹೆಸರು ಮಾಡಿದ್ದೆ, ರಾಜಾಜಿಯವರ ಜೊತೆ ಇದ್ದರೂ ಕೂಡಾ ಅವರು ನನ್ನನ್ನು ರೆಕಮಂಡ್ ಮಾಡಲಿಲ್ಲ. ಅಣ್ಣಾ ದೊರೈ ಅವರು ರಾಜಾಜಿಯವರಿಗೆ ಹೇಳಿ ಚುನಾವಣೆಗೆ ಸ್ಪರ್ಧಿಸಲು ನನಗೆ ಟಿಕೆಟ್ ಕೊಡಿಸಿದರು. ಆಗ ಎಂ.ಎಲ್.ಸಿ. ಆಗಿದ್ದರಿಂದ ಇನ್ನೂ ಮೂರು ವರ್ಷ ನನಗೆ ಅದರಲ್ಲಿಯೇ ಮುಂದುವರೆಯುವ ಅವಕಾಶವಿದ್ದರೂ ನಾನು ಇವರನ್ನು ಬೆಂಬಲಿಸಿ ಚುನಾವಣೆಗೆ ಸ್ಪರ್ಧಿಸಿ ಗೆದ್ದು ಎಂ.ಎಲ್.ಎ. ಆದೆ.

ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ನಾನು ಬಹಳ ಅರ್ಥಪೂರ್ಣವಾಗಿ ನನ್ನ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದೆ ಹಾಗೂ ಬಹಳಷ್ಟು ಕೆಲಸಗಳನ್ನು ಮಾಡುವ ಅವಕಾಶ ಕೂಡ ಒದಗಿ ಬಂತು. 1971ರಲ್ಲಿ ರಾಜಾಜಿಯವರು ತೀರಿಕೊಂಡರು. ರಾಜಕೀಯದ ಚಿತ್ರಣ ಬದಲಾಯಿತು. ರಾಜಾಜಿಯವರು ಎಂ.ಜಿ.ಆರ್. ಅವರನ್ನು ಬೆಂಬಲಿಸುತ್ತಿದ್ದರು. ಆಗ ನಾನು ಡಿ.ಎಂ.ಕೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿದೆ. ಆಗ ಎಂ.ಜಿ.ಆರ್. ಅವರು, 'ರಾಜಾಜಿಯವರು ನಿಮ್ಮನ್ನು ಬೆಂಬಲಿಸುತ್ತಿದ್ದರಲ್ಲವೇ, ನೀವು ಬಹಳ ಬುದ್ಧಿಶಾಲಿಯಾಗಿದ್ದೀರಿ, ಅದು ಜನರಿಗೆ ಉಪಯೋಗವಾಗಲಿ ಎಂದು' ನನ್ನನ್ನು ಅವರ ಪಕ್ಷಕ್ಕೆ ಆಹ್ವಾನಿಸಿದರು. ನಂತರ ಪಕ್ಷದ ಬೇರೆ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡಿದೆ. 1978ರಲ್ಲಿ ಪುನಃ ಪದವೀಧರ ಕ್ಷೇತ್ರದಲ್ಲಿ ಸ್ಪರ್ಧಿಸಿ ಜಯಭೇರಿ ಗಳಿಸಿದೆ.

1980ರಲ್ಲಿ ವಿಧಾನಸಭಾ ಚುನಾವಣೆ, ಆಗ ಕರುಣಾನಿಧಿ ಅಣ್ಣಾ ನಗರದಲ್ಲಿ ಎಂ.ಎಲ್.ಎ. ಸ್ಥಾನಕ್ಕೆ ಸ್ಪರ್ಧಿಸಿದರು. ಎಂ.ಜಿ.ಆರ್. ಅವರು ನನ್ನನ್ನು ಕರುಣಾನಿಧಿ ವಿರುದ್ಧ ಚುನಾವಣೆಗೆ ನಿಲ್ಲಿಸಿದರು. ಆಗ ನಾನು ಅಣ್ಣಾ ನಗರದಲ್ಲಿ ಪ್ರಭಾವಿ ಹಾಗೂ ಶಕ್ತಿಶಾಲಿಯಾದ

ಅಭ್ಯರ್ಥಿಯಾಗಿದ್ದೆ. ಇಂದಿಗೂ ಕೂಡಾ ನನಗೆ ಅಣ್ಣಾ ನಗರದಲ್ಲಿ ಒಳ್ಳೆಯ ಹೆಸರಿದೆ. ಚುನಾವಣೆ ಫಲಿತಾಂಶ ಬಂದಾಗ ಕರುಣಾನಿಧಿ ಅವರು 600 ಓಟುಗಳಿಂದ ಗೆದ್ದರು. ಆ ಚುನಾವಣೆಯಲ್ಲಿ ನಾನು ಸೋತೆನಾದರೂ, ವಸ್ತುತಃ ಅದು ನನ್ನ ಗೆಲುವು ಆಗಿತ್ತು. ಆದರೆ ಕಾನೂನು ರೀತ್ಯ ಅದು ಕರುಣಾನಿಧಿ ಅವರ ಗೆಲುವಾಗಿತ್ತು. ಆದರೆ ಎಂ.ಜಿ.ಆರ್.ಗೆ ನಾನು ಸೋತಿದಕ್ಕೆ ಬೇಜಾರು ಇರಲಿಲ್ಲ, ನೀನು ಹೇಗೂ ಎಂ.ಎಲ್.ಸಿ. ಇದ್ದೀಯಾ, ನಿನ್ನನ್ನು ಆರೋಗ್ಯ ಮಂತ್ರಿಯನ್ನಾಗಿ ಮಾಡುತ್ತೇನೆ ಎಂದು ಹೇಳಿ ಆರೋಗ್ಯ ಮಂತ್ರಿಯನ್ನಾಗಿ ಮಾಡಿದರು.

ಆರೋಗ್ಯ ಮಂತ್ರಿಯಾಗಿ ಬಹಳ ಕಾರ್ಯಕ್ರಮಗಳನ್ನು ಜಾರಿಗೆ ತಂದೆ. ಅಖಿಲ ಭಾರತ ಮಟ್ಟದಲ್ಲಿ ಹೆಸರು ಗಳಿಸಿದೆ. ಆಗ ಕೇಂದ್ರದಲ್ಲಿ ಶ್ರೀ ಪಿ.ವಿ. ನರಸಿಂಹರಾವ್ ಆರೋಗ್ಯ ಸಚಿವರಾಗಿದ್ದರು. ನಮ್ಮ ಸಾಧನೆಯನ್ನು ನೋಡಿ ಅವರಿಗೆ ಬಹಳ ಸಂತೋಷವಾಯಿತು ಮತ್ತು ಅಂದಿನ ಸನ್ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ತಮಿಳುನಾಡಿನ ಸರ್ಕಾರ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು. ನನ್ನನ್ನು ಕೇಂದ್ರ ಆರೋಗ್ಯ ಮಂತ್ರಾಲಯದ ಯೋಜನೆಯೊಂದರಲ್ಲಿ ಡೆಪ್ಯುಟಿ ಚೇರ್‌ಮನ್ ಆಗಿ ಮಾಡಿದರು ಹಾಗು ನನ್ನ ಈ ಎಲ್ಲ ಸಾಧನೆಗಳನ್ನೂ ಪರಿಗಣಿಸಿ 'ಬಿ.ಸಿ. ರಾಯ್' ಪ್ರಶಸ್ತಿ ನೀಡಿ ಪುರಸ್ಕರಿಸಿದರು.

**ಎಂ.ಜಿ.ಆರ್. ಅವರ ನಂತರ ತಾವು ಅಣ್ಣಾ ಡಿ.ಎಂ.ಕೆ. ಪಕ್ಷವನ್ನು ಬಿಟ್ಟಿದ್ದು ಯಾವ ಕಾರಣಕ್ಕಾಗಿ ?**

ಎಂ.ಜಿ.ಆರ್. ತೀರಿಕೊಂಡ ನಂತರ ಅಣ್ಣಾ ಡಿ.ಎಂ.ಕೆ. ಪಕ್ಷ ಜಯಲಲಿತಾ ಬಣ ಮತ್ತು ಜಾನಕಿ ರಾಮಚಂದ್ರನ್ ಬಣಗಳಾಗಿ ಪಕ್ಷ ಎರಡು ಹೋಳಾಯಿತು. ನಾನು ಜಯಲಲಿತಾ ಅವರ ಬಣದಲ್ಲಿ ಡೆಪ್ಯುಟಿ ಜನರಲ್ ಸೆಕ್ರೆಟರಿಯಾಗಿದ್ದೆ. ಶ್ರೀ ರಾಘವನ್ ಅವರು ಜಾನಕಿ ಬಣದ ಡೆಪ್ಯುಟಿ ಜನರಲ್ ಸೆಕ್ರೆಟರಿಯಾಗಿದ್ದರು. ಜಯಲಲಿತಾ ಅವರು ನನ್ನನ್ನು ರಾಜ್ಯಸಭಾ ಸದಸ್ಯನನ್ನಾಗಿ ಮಾಡುವ ಭರವಸೆಯನ್ನು ಕೊಟ್ಟಿದ್ದರು. ಆದರೆ, ರಾಜಕೀಯ ಕಾರಣಗಳಿಂದಾಗಿ ಅವರು ನನಗೆ ಕೊಟ್ಟ ಮಾತನ್ನು ನೆರವೇರಿಸಲಿಲ್ಲ. ಅತ್ಯಂತ ಪ್ರಬಲ ರಾಜಕಾರಣಿಯಾಗಿದ್ದ ನನಗೆ ಅವರು ರಾಜ್ಯ ಸಭಾ ಸೀಟ್‌ನ ವಿಷಯವಾಗಿ ಆ ರೀತಿ ಮಾಡಿದ್ದು ನಮ್ಮಲ್ಲಿ ಭಿನ್ನಾಭಿಪ್ರಾಯ ಉಂಟಾಗಲು ಕಾರಣವಾಯಿತು. ನಂತರ ನಾನು ಜಯಲಲಿತಾ ಅವರ ಪಕ್ಷವನ್ನು ಬಿಟ್ಟೆ, ಅನಂತರ ಬಿಜೆಪಿ ಸೇರಿದೆ. ಅಂದಿನಿಂದಲೂ ಅದರಲ್ಲಿಯೇ ಇದ್ದೇನೆ. ಕಳೆದ 20 ವರ್ಷಗಳಿಂದ ಬಿಜೆಪಿ ನ್ಯಾಷನಲ್ ಕೌನ್ಸಿಲ್ ಸದಸ್ಯನಾಗಿ ಕೆಲಸ ಮಾಡುತ್ತಾ ಬರುತ್ತಿದ್ದೇನೆ.

**ನೀವು ನಿಮ್ಮ ಕಾರ್ಯಕ್ಷೇತ್ರವಾಗಿ ಕರ್ನಾಟಕವನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತಲ್ಲವೇ? ಇದರ ಬಗ್ಗೆ ನೀವು ಏನು ಹೇಳುತ್ತೀರಿ ?**

ನಾನು ವೈದ್ಯಕೀಯ ವೃತ್ತಿ ಮಾಡಿದ್ದು ತಮಿಳುನಾಡಿನಲ್ಲಿ. ಶಾಸಕನಾಗಿ, ಮಂತ್ರಿಯಾಗಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಹೆಸರು ಗಳಿಸಿದ್ದೂ ಅಲ್ಲೇ. ಹೀಗಿರುವಾಗ ಅಲ್ಲಿಯ ಉಪ್ಪು ತಿಂದು ಹಾಗೆ ಮಾಡಲಿಕ್ಕೆ ನನ್ನ ಮನಸ್ಸು ಒಪ್ಪಲಿಲ್ಲ. ಇದರ ಕುರಿತಾಗಿ ನಾನು ಒಂದು ಪುಸ್ತಕವನ್ನೂ ಬರೆದಿದ್ದೇನೆ.

**ಕನ್ನಡದವರಾದ ತಾವು ಮತ್ತು ಜಯಲಲಿತ, ಲಲಿತರಾವ್, ಸುರೇಶ್ ಕಲ್ಮಾಡಿ, ಜಾರ್ಜ್ ಫರ್ನಾಂಡಿಸ್, ಗೋಪಾಲ ಶೆಟ್ಟಿ, ಡಾ. ಅಜಯ್‌ಕುಮಾರ್ ಮುಂತಾದವರು ತಾಯ್ನಾಡಿನಿಂದ ಹೊರಗಡೆ ಹೋಗಿ ಬೇರೆ ಬೇರೆ ರಾಜ್ಯಗಳಲ್ಲಿ ರಾಜಕೀಯದಲ್ಲಿ ಸೇವೆ ಸಲ್ಲಿಸಿ ದೊಡ್ಡ ಹೆಸರು ಮಾಡಿದವರು. ನಿಜವಾಗಿ ಇದು ಒಂದು ಕೌತುಕಭರಿತ ಸಂಗತಿ. ಇದು ನಿಮ್ಮೆಲ್ಲರಿಗೂ ಹೇಗೆ ಸಾಧ್ಯವಾಯಿತು ಅಂತ ಸ್ವಲ್ಪ ಹೇಳ್ತೀರಾ ಸರ್ ?**

ಶ್ರೀಮತಿ ಲಲಿತಾರಾವ್ ಮಹಾರಾಷ್ಟ್ರ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದರು, ನಾನು ತಮಿಳುನಾಡು ಸರ್ಕಾರದಲ್ಲಿ ಆರೋಗ್ಯ ಮಂತ್ರಿಯಾಗಿದ್ದೆ, ನಾನು ಮತ್ತು ಶ್ರೀಮತಿ ಲಲಿತಾರಾವ್ ಇಬ್ಬರೂ ಒಟ್ಟಿಗೆ ಇದ್ದು ಮಾತನಾಡುತ್ತಿದ್ದಾಗ ಆಗ ಕೇಂದ್ರ ಆರೋಗ್ಯ ಸಚಿವರಾಗಿದ್ದ ಶ್ರೀ ಶಂಕರಾನಂದ ಅವರು ನಮ್ಮನ್ನು ನೋಡಿ ಇಬ್ಬರೂ ಮಂಗಳೂರಿನವರು ಕನ್ನಡದಲ್ಲಿ ಮಾತನಾಡುತ್ತಿದ್ದೀರಾ ಎಂದು ಕೇಳಿದ್ದರು. ದಕ್ಷಿಣ ಕನ್ನಡದವರು ಬುದ್ಧಿವಂತರು ನಮ್ಮ ಮಣ್ಣಿನ ಗುಣವೇ ಹಾಗೆ. ನಾನು ತಮಿಳುನಾಡಿನಲ್ಲಿ ಹೋಗಿ ನೆಲೆನಿಂತಿದ್ದೇನೆ, ಅಲ್ಲೇ ಬೆಳೆದು ಬಂದ ನಾನು ತಮಿಳುನಾಡಿಗಾಗಿ ಕೆಲಸ ಮಾಡುತ್ತಿದ್ದೇನೆ ಹಾಗೆ ಜಾರ್ಜ್ ಫರ್ನಾಂಡಿಸ್ ಮುಜಫರ್ ನಗರ, ಬಿಹಾರದಲ್ಲಿ ಅಲ್ಲಿಯ ಜನರಿಗಾಗಿ ಕೆಲಸ ಮಾಡಿ ಅಲ್ಲಿಯವರು ಆಗಿದ್ದಾರೆ.

**ಪ್ರಸ್ತುತ ಎರಡೂ ರಾಜ್ಯಗಳ ನಡುವೆ ಎದ್ದಿರುವ ಕಾವೇರಿ ನದಿ ನೀರಿನ ಹಂಚಿಕೆ ಸಮಸ್ಯೆಯ ಬಗ್ಗೆ ತಮ್ಮ ಅಭಿಪ್ರಾಯವೇನು?**

ತಮಿಳುನಾಡಿನಲ್ಲಿ ಇರುವವರಿಗೆ ಬಹಳ ಕಷ್ಟ ಇದೆ, ಇಬ್ಬರೂ ಮುಖ್ಯಮಂತ್ರಿಗಳು ಮಾತನಾಡಿಕೊಂಡು ಹೋದರೆ ಸಮಸ್ಯೆ ಸುಗಮವಾಗಿ ಬಗೆಹರಿಯುತ್ತದೆ. ಎಂ.ಜಿ.ಆರ್. ಹಾಗೂ ರಾಮಕೃಷ್ಣ ಹೆಗಡೆ ಅವರು ಇದ್ದಾಗ ಅದು ಸುಗಮವಾಗಿ ಹೋಗುತ್ತಿತ್ತು. ಅವರು ನನ್ನನ್ನು ಒಮ್ಮೆ ರಾಮಕೃಷ್ಣ ಹೆಗಡೆ ಅವರ ಜೊತೆ ಮಾತುಕತೆಗೆ ಕಳುಹಿಸಿದ್ದರು. ತಮಿಳುನಾಡಿನ ಕಷ್ಟವನ್ನೂ ಅವರು ತಿಳಿದುಕೊಳ್ಳಬೇಕು. ಕೋರ್ಟ್ ಮೊರೆಹೋಗುವುದು ಸಮಸ್ಯೆಯನ್ನು ಬಗೆಹರಿಸಿಕೊಳ್ಳುವ ಒಂದು ವಿಧಾನ. ಅಲ್ಲದೆ ರಾಜಕೀಯ ಒತ್ತಡ ಹಾಕುವುದು ಅದರ ಇನ್ನೊಂದು ಬಗೆ. ನನ್ನ ದೃಷ್ಟಿಯಲ್ಲಿ ಎರಡೂ ಮುಖ್ಯಮಂತ್ರಿಗಳೂ ಮಾತನಾಡಿಕೊಂಡು ಹೋಗುವುದು ಒಳ್ಳೆಯದು.

**ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿಯವರು ರೂ. 500 ಮತ್ತು ರೂ. 1000/– ನೋಟುಗಳನ್ನು ಚಲಾವಣೆಯಿಂದ ಹಿಂಪಡೆದಿದ್ದಾರೆ, ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಈ ಕ್ರಮದಲ್ಲಿ ಸಮಸ್ಯೆ ಇದೆ, ನನ್ನ ಅಭಿಪ್ರಾಯ ಏನೆಂದರೆ ನಾನು ಮೆಡಿಕಲ್ ಸೈನ್ಸ್‌ನಲ್ಲಿ ಹೇಳುವ ಹಾಗೆ ಟೂಥ್‌ಎಕ್ಸ್‌ಟ್ರಾಕ್ ಮಾಡುವುದು, ಆಗ ನೋವಾಗುತ್ತದೆ, ಬಾಯಿ ಹಾಳಾಗುತ್ತದೆ, ಕ್ಯಾನ್ಸರ್ ಆಗುತ್ತದೆ. ಎಕ್ಸ್‌ಟ್ರ್ಯಾಕ್ ಮಾಡುವಾಗ ನೋವಿನ ಇಂಜೆಕ್ಷನ್ ಕೊಡುತ್ತೇವೆ, ಅದನ್ನು ಕೊಡುವಾಗ ನೋವಿರುತ್ತದೆ, ಮತ್ತೆ ಸರಿ ಹೋಗುತ್ತದೆ, ಆ ರೀತಿಯಾಗಿ ನಿಶ್ಚಯವಾಗಿ ಪ್ರತಿಫಲ ಸಿಗುತ್ತದೆ, ಹಠಾತ್ತಾಗಿ ಮಾಡಬಾರದಿತ್ತು ಎನ್ನುತ್ತಾರೆ ಕೆಲವರು. ಆದರೆ ಎಲ್ಲವನ್ನೂ ಮೊದಲೇ ಸಿದ್ಧಗೊಳಿಸಿಕೊಂಡು ಮಾಡಲು ಹೋಗಿದ್ದರೆ ಅದು ಯಾರಿಗಾದರೂ ಗೊತ್ತಾದದ್ದೆ ಆದರೆ ಅದರಿಂದ ಏನೂ ಪ್ರಯೋಜನವಿಲ್ಲದೇ ಹೋಗುತ್ತಿತ್ತು, ಹಠಾತ್ತಾಗಿ ಮಾಡಿದಾಗ್ಯೂ ಸಹ ಇವತ್ತು ಇಷ್ಟು ಅಕ್ರಮ ನಡೆದಿದೆ ಎಂಬ ವರದಿಗಳಾಗುತ್ತಿವೆ.

ತಮಿಳುನಾಡಿನಲ್ಲಿ ಕೂಡಾ ದೊಡ್ಡ ಪ್ರಮಾಣದಲ್ಲಿ ಕಪ್ಪು ಹಣ ಚಲಾವಣೆ ಮತ್ತು ಭ್ರಷ್ಟಾಚಾರ ನಡೆದಿದೆ. ಅದರಿಂದಾಗಿ ನನ್ನ ಮನಸ್ಸಿಗೆ ಕೂಡ ಬಹಳ ನೋವಾಗಿದೆ. ಇನ್ನು ಮೂರು ತಿಂಗಳಲ್ಲಿ ಎಲ್ಲವೂ ಸರಿಯಾಗುತ್ತದೆ ಎಂದು ನನ್ನ ಅಭಿಪ್ರಾಯ, ಮೋದಿಯವರ ಬ್ರಹ್ಮಾಸ್ತ್ರದಿಂದ ಎಲ್ಲ ಹೊರಗೆ ಬಂತು, ಬ್ರಹ್ಮಾಸ್ತ್ರ ಪ್ರಯೋಗಿಸುವಾಗ ಬಹಳಷ್ಟು ತೊಂದರೆಗಳಾಗುತ್ತವೆ, ಈಗ ಆಗಿರುವುದೂ ಅದೇ ಆಗಿದೆ. ಬಿಜೆಪಿಯ ಎಲ್ಲ ಶಾಸಕರು, ಸಂಸದರು, ಕಾರ್ಯಕರ್ತರು ಕೂಡಾ ಜನರ ಬಳಿ ಹೋಗಿ ಎಲ್ಲವನ್ನು ಸರಿಯಾಗಿ ವಿವರಿಸಿ ಹೇಳಬೇಕು. ಒಟ್ಟಾರೆ ಇದು ಒಂದು ಒಳ್ಳೆಯ ಕ್ರಮ.

**ಸಾಹಿತ್ಯದಲ್ಲೂ ನೀವು ಒಳ್ಳೆಯ ಹೆಸರು ಮಾಡಿದ್ದೀರಿ. ತಮಿಳಿನ ಪ್ರಸಿದ್ಧ ಕಂಬರಾಮಾಯಣವನ್ನು ಆಂಗ್ಲಭಾಷೆಗೆ ಅನುವಾದಿಸಿದ್ದೀರಿ, ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದ ತಮಗೆ ಸಾಹಿತ್ಯದ ನಂಟು ಬೆಳೆದುದ್ದು ಹೇಗೆ?**

ತಮಿಳಿನಲ್ಲಿ ಪೇಟೆಂಟ್‌ಗೆ ಮೊದಲು ಲೇಬಲ್ ಹಾಕಿದ್ದು ನಾನು. ಕಲಿತದ್ದು ತೆಲುಗು, ನಂತರ ತಮಿಳನ್ನು ಕಷ್ಟಪಟ್ಟು ಕಲಿತೆ. ತಮಿಳಿನಲ್ಲಿರುವ 'ಕಂಬರಾಮಾಯಣ'ವನ್ನು ಅದುವರೆಗೆ ಯಾರೂ ಇಂಗ್ಲಿಷಿಗೆ ಅನುವಾದ ಮಾಡಿರಲಿಲ್ಲ. ನಾನೇ ಮೊದಲು ಅನುವಾದ ಮಾಡಿದ್ದು, ಗದ್ಯದಲ್ಲಿ ಅನುವಾದ ಮಾಡಿದವರೇ ಇಲ್ಲ.

**ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಅಗಾಧ ಅನುಭವಗಳನ್ನು ಹೊಂದಿರುವಿರಿ. ಇಂದಿನ ಯುವ ಪೀಳಿಗೆಗೆ ತಮ್ಮ 'ಕಿವಿಮಾತು' ಏನು?**

ನಮಗೆ ಒಳ್ಳೆಯ ಅವಕಾಶಗಳು ಸಿಕ್ಕಾಗ ಅದನ್ನು ದುರುಪಯೋಗಪಡಿಸಿಕೊಳ್ಳದೇ, ಜನರಿಗೆ ಒಳ್ಳೆಯದನ್ನು ಮಾಡಿದಾಗ ಅದರಿಂದ ಸಿಗುವ ಆತ್ಮತೃಪ್ತಿ ಕೋಟಿ ರೂಪಾಯಿ ಕೊಟ್ಟರೂ ಸಿಗುವುದಿಲ್ಲ. ಆದ್ದರಿಂದ ಇಂತಹ ಸಂದರ್ಭಗಳು ಸಿಕ್ಕಾಗ ಅವುಗಳನ್ನು ಉಪಯೋಗಿಸಿಕೊಳ್ಳದೇ ಹೋದರೆ ಅವರಷ್ಟು ಹುಚ್ಚರು ಯಾರೂ ಇರಲಾರರು. ಅ




# ನವದೆಹಲಿಯಲ್ಲಿ ಕನಕದಾಸರ 529ನೇ ಜಯಂತ್ಯೋತ್ಸವ

ನವದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘವು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಾಷ್ಟ್ರೀಯ ಸಂತಕವಿ ಕನಕದಾಸ ಸಂಶೋಧನಾ ಮತ್ತು ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ 'ದಾಸ ಶ್ರೇಷ್ಠ ಭಕ್ತ ಕನಕದಾಸರ 529ನೇ ಜಯಂತ್ಯೋತ್ಸವ' ಆಚರಣೆಯನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 2016ರ ಡಿಸೆಂಬರ್ 4 ಮತ್ತು 5ರಂದು ನಡೆಸಿತು. ಈ ಎರಡು ದಿನಗಳ ಕಾರ್ಯಕ್ರಮಕ್ಕೆ ಕನಕಗುರು ಪೀಠದ ಪೀಠಾಧಿಪತಿಗಳಾದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ಅಧಿಕೃತವಾಗಿ ಚಾಲನೆ ನೀಡಿದರು.

ಗುಲಬರ್ಗಾ ವಿಭಾಗದ ಪೀಠಾಧ್ಯಕ್ಷರಾದ ಶ್ರೀ ಸಿದ್ದರಾಮಾನಂದಪುರಿ ಮಹಾಸ್ವಾಮಿಗಳು ಹಾಗೂ ಶ್ರೀ ಈಶ್ವರಾನಂದಪುರಿ ಮಹಾಸ್ವಾಮಿಗಳು ಈ ಸಂದರ್ಭದಲ್ಲಿ ಉಪಸ್ಥಿತಿಯಿದ್ದರು. ರಾಷ್ಟ್ರದ ಮೂಲೆ ಮೂಲೆಯಿಂದ ನೂರಾರು ಜನರು ಬಂದಿದ್ದರು. ಕಾರ್ಯಕ್ರಮದ ಆರಂಭದಲ್ಲಿ ದಾಸಶ್ರೇಷ್ಠ ಕನಕದಾಸರ ಭಾವಚಿತ್ರಕ್ಕೆ ಪೂಜೆ ಮಾಡಲಾಯಿತು. ನಂತರ ಸಂಘದ ಸಮೀಪದಲ್ಲಿರುವ ರಾಘವೇಂದ್ರ ಮಠದಿಂದ ಪ್ರಾರಂಭವಾಗಿ ದೆಹಲಿ ಕರ್ನಾಟಕ ಸಂಘದವರೆಗೆ ಡೊಳ್ಳುಕುಣಿತ, ಗೊರವರ ಕುಣಿತ, ಮದ್ದಳೆ, ಕಂಸಾಳೆ, ತೆಂಗಿನಕಾಯಿ ಪವಾಡ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಕನಕದಾಸರ ಭಾವಚಿತ್ರದ ಮೆರವಣಿಗೆಯಾಯಿತು.

ಚಾಮರಾಜನಗರ ಜಿಲ್ಲೆಯಿಂದ ಬಂದಿದ್ದ ಗೊರವ ಕುಣಿತ ತಂಡವು ವಿಶಿಷ್ಟ ವೇಷಭೂಷಣ ಹಾಗೂ ಡಮರುಗಳ ನಾದದೊಂದಿಗೆ ತನ್ನದೇ ಆದ ರೀತಿಯ ಶೈಲಿಯ ನೃತ್ಯದಿಂದ ಜನರನ್ನು ಆಕರ್ಷಿಸಿತು. ಮಂಡ್ಯದ ವೀರಗಾಸೆಯ ಕುಣಿತ, ಮುಖಚರ್ಯೆ, ಕತ್ತಿಯನ್ನು ತಿರುಗಿಸುವ ಸಾಹಸವನ್ನು ನೆರೆದಿದ್ದ ಜನ ಕಣ್ಣು ಮಿಟುಕಿಸದೆ ನೋಡುತ್ತಿದ್ದರು. ದೆಹಲಿಯ ಮೂಲೆ ಮೂಲೆಯಿಂದ ಬಂದಿದ್ದ ಕರ್ನಾಟಕದ ಮಹಿಳೆಯರು ರಂಗು ರಂಗಿನ ಸೀರೆಯನ್ನುಟ್ಟು ಲವಲವಿಕೆಯಿಂದ ತೆಂಗಿನಕಾಯಿಯ ಕಳಸವನ್ನು ಹೊತ್ತು ಕನಕದಾಸರ ಭಾವಚಿತ್ರದ ಮುಂದೆ ಮಿಲಿಟರಿ ಸಿಪಾಯಿಗಳಂತೆ ಸಾಗುತ್ತಿರುವ ದೃಶ್ಯವು ಆಕರ್ಷಕವಾಗಿತ್ತು. ಕರ್ನಾಟಕದ ಹೆಸರುವಾಸಿಯಾಗಿರುವ ಕಂಸಾಳೆ ಮತ್ತು ಡೊಳ್ಳುಕುಣಿತವನ್ನು ಮೈಸೂರಿನ ತಂಡಗಳು ಪ್ರದರ್ಶಿಸಿದವು. ಕೋಲಾರ ಜಿಲ್ಲೆಯ ತೆಂಗಿನಕಾಯಿ ಪವಾಡ ತಂಡವು ದೇವರ ಹೆಸರಿನಲ್ಲಿ ತೆಂಗಿನಕಾಯಿಗಳನ್ನು ತಲೆಯ ಮೇಲೆ ಒಡೆದುಕೊಳ್ಳುವ ರೀತಿ ಬಹಳ ಅದ್ಭುತವಾಗಿತ್ತು. ಮೆರವಣಿಗೆ ಕಾರ್ಯಕ್ರಮಕ್ಕೆ ಈ ಎಲ್ಲಾ ತಂಡಗಳನ್ನು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಾಡಿನಿಂದ ನವದೆಹಲಿಗೆ ಕರೆಸಿಕೊಂಡಿತ್ತು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಶ್ಯಾಂ ಸಿಂಗ್ ಶಶಿಯವರು ತಳವರ್ಗಗಳ ಸಾಮಾಜಿಕ ಸಮಾನತೆಗಾಗಿ ದಾಸಶ್ರೇಷ್ಠ ಕನಕದಾಸರ ಹೋರಾಟದ ಬಗ್ಗೆ ಮಾತನಾಡಿ ಕನಕದಾಸರು ಸಮಾಜದ ಉನ್ನತಿಗಾಗಿ ಪಟ್ಟ ಶ್ರಮ ಅವರ ಜೀವನದಲ್ಲಿ ಆದ ಮಾರ್ಪಾಟುಗಳನ್ನು ವಿವರಿಸಿದರು. ಕನಕದಾಸರ ಕೀರ್ತನೆಗಳನ್ನು ಎಲ್ಲರೂ ಓದಿ ಅರ್ಥಮಾಡಿಕೊಳ್ಳುವುದರ ಜೊತೆಗೆ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು. ದೇಶದ ಮೂಲೆ ಮೂಲೆಗಳಲ್ಲಿ ನೆಲೆಸಿರುವ ಕುರುಬ ಜನಾಂಗದ ಸ್ಥಿತಿಗತಿಗಳು, ಮಠದ ಪರಂಪರೆ ವಿಷಯವಾಗಿ ಎಳೆ ಎಳೆಯಾಗಿ ಬಿಡಿಸಿ ಮಾತನಾಡಿ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲರೂ ಒಟ್ಟಾಗಬೇಕೆಂದು ಮನವಿ ಮಾಡಿದರು. ಈ ಸಮಯದಲ್ಲಿ ಮೈಸೂರಿನ ಡಾ. ನಾಗರಾಜ ಆಚಾರ್ಯ ಹಾಗೂ ಕರ್ನಾಟಕ ಲೋಕಸೇವಾ ಆಯೋಗ (ಕೆ.ಪಿ.ಎಸ್.ಸಿ.) ಸದಸ್ಯರಾದ ಎಚ್.ಡಿ. ಪಾಟೀಲರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಮಹದೇವ್ ಆರ್ ಅವರು ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಕಾರ್ಯಕ್ರಮ ಯಶಸ್ವಿಯಾಗಲು ಶ್ರಮಿಸಿದರು. ಅವರನ್ನು ಮರೆಯಲಾಗುವುದಿಲ್ಲ. ಸಂಘದ ಗೌರವಾಧ್ಯಕ್ಷರಾದ ಡಾ. ಎಸ್.ಬಿ. ಮುನಿರಾಜು ಅವರು ಈ ಎರಡು ದಿನಗಳ ಕಾರ್ಯಕ್ರಮದ ಮುಖ್ಯ ಭೂಮಿಕೆಯಲ್ಲಿ ನಿಂತು ಜನರ ನಿರೀಕ್ಷೆಗಿಂತಲೂ ಹೆಚ್ಚಾಗಿ ಯಶಸ್ವಿಗೊಳಿಸಿದರು. ಸಂಘದ ಕ್ರಿಯಾಶೀಲ ಸದಸ್ಯರಾದ ಶ್ರೀಮತಿ ರಶ್ಮಿ ಮುನಿರಾಜ್ ಅವರು ಕಾರ್ಯಕ್ರಮದ ನಿರೂಪಕಿಯಾಗಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಸಂಗೊಳ್ಳಿ ರಾಯಣ್ಣ ಸಂಘದ ಖಜಾಂಚಿಗಳಾದ ಶ್ರೀ ರಾಜಣ್ಣ ಬಿರಾದಾರ ಸಹ ಖಜಾಂಚಿಗಳಾದ ಶ್ರೀ ಶೇಖರಪ್ಪ ಅವರು ಕಾರ್ಯಕ್ರಮದ ಮೇಲುಸ್ತುವಾರಿಯನ್ನು ನೋಡಿಕೊಂಡರು. ಕಾರ್ಯಕಾರಿ ಸದಸ್ಯರಾದ ಶ್ರೀ ಟಿ.ಎಂ. ಮೈಲಾರಪ್ಪ, ಶ್ರೀ ಸಾಬುದರ್ಗಾ ಹಾಗೂ ಉಪಾಧ್ಯಕ್ಷರಾದ ಶ್ರೀ ವೈಜನಾಥ್ ಅವರು ಕಾರ್ಯಕ್ರಮದ ನಿರ್ದೇಶಕರಾಗಿ ಮಾರ್ಗದರ್ಶನವನ್ನು ನೀಡಿದರು.

ಡಿಸೆಂಬರ್ 5ರಂದು ನಡೆದ ಕಾರ್ಯಕ್ರಮದ ದಿವ್ಯಸಾನಿಧ್ಯವನ್ನು ಪರಮಪೂಜ್ಯ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯದ ಸಚಿವರಾದ ಶ್ರೀ ಬಂಡಾರು ದತ್ತಾತ್ರೇಯ, ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಕೇಂದ್ರಿಯ ಸಂಸದೀಯ ವ್ಯವಹಾರಗಳ ಸಚಿವಾಲಯದ ಸಚಿವರಾದ ಶ್ರೀ ಅನಂತ ಕುಮಾರ್ ಹಾಗೂ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಸಚಿವಾಲಯದ ಸಚಿವರಾದ ಶ್ರೀ ಸದಾನಂದ ಗೌಡ ಅವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ದೆಹಲಿ ಸುದ್ದಿ ರಾಷ್ಟ್ರೀಯ ಕನ್ನಡ ದಿನಪತ್ರಿಕೆ ಹೈದರಾಬಾದ್ ಆವೃತ್ತಿ ಹಾಗೂ ಶೆಫರ್ಡ್ ಇಂಡಿಯಾ





ಇಂಟರ್‌ನ್ಯಾಶನಲ್ ಸಂಸ್ಥೆಯ ವೆಬ್‌ಸೈಟ್ www. shepherds indiainternational.com ನ್ನು ಸಚಿವರಾದ ಶ್ರೀ ಬಂಡಾರು ದತ್ತಾತ್ರೇಯ ಅವರು ಲೋಕಾರ್ಪಣೆ ಗೊಳಿಸಿದರು. ಈ ಸಂದರ್ಭದಲ್ಲಿ ಬಿಜೆಪಿಯ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷರಾದ ಶ್ರೀ ಎಸ್.ಪಿ. ಸಿಂಗ್ ಬಘೇಲ್, ಬೀದರ್ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಭಾರತಿಬಾಯಿ ಮಲ್ಲಿನಾಥ ಶೆರಿಕಾರ, ದಿನೇಶ ಮೊಹಾನಿಯಾ, ವೆಂಕಟೇಶ್ ಕೋಲಾರ, ಡಾ. ಸಿದ್ದರಾಮಣ್ಣ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಯಲಹಂಕ, ಶ್ರೀ ಎಂ. ಲೋಕೇಶ್, ಯೋಜನಾಧಿಕಾರಿಗಳು, ಭಾರತ ಸರ್ಕಾರ, ಶ್ರೀ ನಾರಾಯಣಸ್ವಾಮಿ ಜಿಲ್ಲಾ ಯೋಜನಾಧಿಕಾರಿ ಇನ್ನಿತರ ಗಣ್ಯರು ಹಾಜರಿದ್ದರು.

ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ಸುಮಾರು 300 ಜನ ವಿಶೇಷ ಸಾಧಕರಿಗೆ ಮೈಸೂರು ಪೇಟವನ್ನಿಟ್ಟು, ಶಾಲು ಹೊದಿಸಿ, ಹೂಗುಚ್ಛ ಮತ್ತು ನೆನಪಿನ ಕಾಣಿಕೆಯನ್ನು ನೀಡಿ ಸನ್ಮಾನಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಅವುಗಳಲ್ಲಿ ಕೋಲಾರ ರಮೇಶ್‌ರವರು ನೀಡಿದ ಕುರುಬರೋ ನೃತ್ಯರೂಪಕವು ಎಲ್ಲರ ಗಮನ ಸೆಳೆಯಿತಲ್ಲದೆ ಎಲ್ಲರ ಮೆಚ್ಚುಗೆ ಪಡೆದುದರಿಂದ ಅದನ್ನು ಮೂರು ಬಾರಿ ಪ್ರದರ್ಶಿಸಲಾಯಿತು. ಈ ಹಾಡಿಗೆ ಡಾ. ಮುನಿರಾಜು, ರಶ್ಮಿ, ಆಶಾಲತಾ, ಮಹದೇವ್, ಭಾರತೀಬಾಯಿ ಮತ್ತಿತರರು ಹೆಜ್ಜೆ ಹಾಕಿ ಕುಣಿದರು.

ಕಾರ್ಯಕ್ರಮದ ಕೊನೆಯಲ್ಲಿ ಮಾತನಾಡಿದ ಸಂಘದ ಗೌರವಾಧ್ಯಕ್ಷರಾದ ಡಾ. ಎಸ್.ಬಿ. ಮುನಿರಾಜು ದೆಹಲಿ ಕರ್ನಾಟಕ ಸಂಘದ ಮತ್ತು ಅದರ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರ ಸಹಕಾರವನ್ನು ಸ್ಮರಿಸಿದರು. ಕಾರ್ಯಕ್ರಮದ ಯಶಸ್ವಿಗೆ ಕಾರಣರಾದ ಜನಕಪುರಿ ಕನ್ನಡಕೂಟ, ಗುರ್‌ಗಾಂವ್ ಕನ್ನಡ ಸಂಘ, ಒಕ್ಕಲಿಗರ ಗೌಡ ಸಮಾಜ, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್, ದೆಹಲಿ ಕನ್ನಡಿಗರ ಕಲ್ಯಾಣ ಸಮಿತಿ, ಜೆ.ಎಸ್.ಎಸ್. ಕನ್ನಡ ಸಂಘ, ದೆಹಲಿ ಪಾಲ್ ಸಮಾಜ, ದೆಹಲಿ ತುಳುಸಿರಿ, ದೆಹಲಿ ವಿಶ್ವವಿದ್ಯಾಲಯದ ಸಿಬ್ಬಂದಿ, ಇತರೆ ಇಲಾಖೆ, ಸಚಿವಾಲಯಗಳಿಂದ ಬಂದಿದ್ದ ಹಾಗೂ ನೇರವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದವರೆಲ್ಲರನ್ನು ಸ್ಮರಿಸಿಕೊಂಡು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಅ

***ಮಹದೇವ ಆರ್***

# ಜನಕಪುರಿ ಕನ್ನಡ ಕೂಟದ ರಾಜ್ಯೋತ್ಸವ ಮತ್ತು ಆಟೋಟ ಸ್ಪರ್ಧೆ



ಜನಕಪುರಿ ಕನ್ನಡ ಕೂಟದ 40ನೇಯ ರಾಜ್ಯೋತ್ಸವ ಮತ್ತು ಆಟೋಟ ದಿನಾಚರಣೆಯನ್ನು ಅತ್ಯಂತ ಹೆಮ್ಮೆ ಹಾಗೂ ವಿಜೃಂಭಣೆಯಿಂದ ಇದೇ ಡಿಸೆಂಬರ್ 25ರಂದು ಡಾ. ಎಸ್.ಎಲ್. ಭಂಡಾರ್‌ಕರ್ ಅವರ ಅಧ್ಯಕ್ಷತೆಯಲ್ಲಿ ಜನಕಪುರಿಯ ಡಿಸ್ಟ್ರಿಕ್ಟ್ ಪಾರ್ಕಿನಲ್ಲಿ ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಡಾ. ಅಶೋಕ್ ಈಟಿಯವರು ಮಾಲಿನ್ಯದ ಬಗ್ಗೆ ಮಾತನಾಡುತ್ತ ಅದೇ ಸಂಜೆ ಡಾ. ಎಸ್.ಎಲ್. ಭಂಡಾರ್‌ಕರ್ ಅವರ ಪುಸ್ತಕ ಬಿಡುಗಡೆಯ ಬಗ್ಗೆ ಮಾತನಾಡಿದರು.

ಮಹಿಳಾ ಮಂಡಳಿಯ ಮಾಜಿ ಅಧ್ಯಕ್ಷೆ ಶ್ರೀಮತಿ ಸವಿತಾ ಇನಾಮದಾರ್ ಅವರು ಸದಸ್ಯರ ಉತ್ಸಾಹವನ್ನು ಮೆಚ್ಚುತ್ತ, ದೆಹಲಿಯ ವ್ಯಸ್ಥ ಜೀವನದಲ್ಲಿ ಸ್ವಸ್ಥವಾಗಿರಲು ವ್ಯಾಯಾಮದ ಮಹತ್ವ ಬಗ್ಗೆ ಹಾಗೂ ದೆಹಲಿ ಪೋಲೀಸರ ಸೇವೆಯನ್ನು ಶ್ಲಾಘಿಸುತ್ತ ಮಾತಾಡಿದರು. ಶ್ರೀ ಎನ್.ಪಿ. ಚಂದ್ರಶೇಖರ್ ಅವರು ಸದಸ್ಯರ ಸಹಕಾರವನ್ನು ಸ್ಮರಿಸುತ್ತಾ ಅವರೆಲ್ಲರೂ ಕಾರ್ಯಕ್ರಮಗಳಲ್ಲಿ ಮುತುವರ್ಜಿಯಿಂದ ಭಾಗವಹಿಸುತ್ತಿರುವುದಕ್ಕೆ ಅಭಿನಂದಿಸಿದರು.

ಡಾ. ಭಂಡಾರ್‌ಕರ್ ಅವರು ತಮ್ಮ ಪುಸ್ತಕ 'ವಾಹನ ಮಾಲಿನ್ಯ ಮತ್ತು ಪರ್ಯಾಯ ಇಂಧನ'ದ ಬಗ್ಗೆ ಮಾತನಾಡಿ, ಸದಸ್ಯರ ಪಾಲ್ಗೊಳ್ಳುವಿಕೆ ಇದೇ ರೀತಿ ಮುಂದುವರಿಯಲಿ ಎಂದು ಹಾರೈಸಿದರು. ಕೂಟದ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ಮಂಜು ಮುಸುಕಿದ್ದರೂ ಸಹ ಪುಟ್ಟ ಪುಟ್ಟ ಮಕ್ಕಳೊಂದಿಗೆ ಬಂದ ಸದಸ್ಯರನ್ನು ಸ್ವಾಗತಿಸುತ್ತ ಇಂದಿನ ಮಧ್ಯಾಹ್ನದ ಊಟವನ್ನು ಸದ್ಯಕ್ಕೆ ಭಡ್ತಿ ಹೊಂದಿದ ಕೂಟದ ಪೋಲಿಸರಿಂದ ಪ್ರಾಯೋಜಿಸಲಾಗಿದೆ ಎಂದು ತಿಳಿಸಿದರು.

ಕೊರೆಯುವ ಚಳಿಯಲ್ಲಿ ಎರಡು ವರ್ಷದ ಮಕ್ಕಳಿಂದ ಹಿಡಿದು ಎಪ್ಪತ್ತರ ಹರೆಯದವರೆಲ್ಲ ಬಹಳ ಹುರುಪಿನಿಂದ ಆಟೋಟಗಳಲ್ಲಿ ಭಾಗವಹಿಸಿದರು. 5–10 ವರ್ಷದ ಪುಟ್ಟ ಮಕ್ಕಳಿಗೆ–ಕಪ್ಪೆ ಜಿಗಿತ ಮತ್ತು ಓಟ, 11–18 ವರ್ಷದವರಿಗೆ ಓಟ ಮತ್ತು ಶಾಟ್ ಪುಟ್, ಮಹಿಳೆಯರಿಗೆ–ವೇಗದ ನಡಿಗೆ, ನಿಂಬೆ ಮತ್ತು ಚಮಚ, ಶಾಟ್ ಪುಟ್ ಹಾಗೂ ಸಂಗೀತ ಕುರ್ಚಿಯ ಸ್ಪರ್ಧೆ ಇತ್ತು. ಪುರುಷರಿಗಾಗಿ–ವೇಗದ ನಡಿಗೆ, ಓಟ ಮತ್ತು ಶಾಟ್ ಪುಟ್.

ಎಲ್ಲಾ ರೀತಿಯ ಆಟೋಟಗಳಲ್ಲಿ ಭಾಗವಹಿಸುತ್ತಿದ್ದ ಮಕ್ಕಳ ಉತ್ಸಾಹ ನೋಡಲು ಮುದ ನೀಡುತ್ತಿತ್ತು. ತಾವು ಯಾರಿಗೂ ಕಡಿಮೆಯಿಲ್ಲಾ ಎನ್ನುವ ಮಹಿಳಾಮಣಿಗಳು ಹುರುಪಿನಿಂದ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಹುಮಾನ ಪಡೆದಾಗ ಅವರ ಮನೆಯವರ ಮುಖಗಳೂ ಅರಳಿದ್ದವು. ಪುರುಷರ ಆಟೋಟಗಳಲ್ಲಿ ಸ್ಪರ್ಧೆಗಿಂತಲೂ ಹೆಚ್ಚಾಗಿ ನಗೆಹೊನಲಿನಿಂದ ತುಂಬಿದ ಸಲುಗೆಯ ಬಾಂಧವ್ಯ ನೋಡಲು ಸಿಕ್ಕಿತು. ಶ್ರೀನಾಥ್ ಮತ್ತು ಶ್ರೀ ಕೃಷ್ಣರಾಜ್ ಅವರು ಎಲ್ಲಾ ಆಟೋಟಗಳನ್ನು ನಡೆಸಿಕೊಟ್ಟರು. ಮಧ್ಯಾಹ್ನ ರುಚಿಕಟ್ಟಾದ ಬಿಸಿಯೂಟ ಸವಿದ ಬಳಿಕ ಮಹಿಳೆಯರ ಸಂಗೀತಮಯ ಕುರ್ಚಿಯ ಸ್ಪರ್ಧೆ ನಡೆಸಲಾಯಿತು. ಜನಕಪುರಿ ಕನ್ನಡ ಕೂಟದ ಸದಸ್ಯರು ಕಾರ್ಯಕ್ರಮದಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿ ಅದರ ಯಶಸ್ಸಿಗೆ ಪಾತ್ರರಾದರು. ಕಾರ್ಯಕ್ರಮದ ಕೊನೆಗೆ ಶ್ರೀ ಶೇಷಗಿರಿ ನಾಯಕರು ಬಹುಮಾನ ಸಿಕ್ಕವರಿಗೆ ಹಾಗೂ ಭಾಗವಹಿಸಿದ ಸ್ಪರ್ಧಾಳುಗಳಿಗೆ ಅಭಿನಂದಿಸುತ್ತ ಕಾರ್ಯಕ್ರಮವನ್ನು ಸಫಲಗೊಳಿಸಿದ ಎಲ್ಲಾ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಅ

***ಸವಿತಾ ಇನಾಮದಾರ್***

# ದೆಹಲಿ ಕರ್ನಾಟಕ ಸಂಘದದಲ್ಲಿ ಬೆಳಕೆರೆಯವರಿಗೆ ಶ್ರದ್ಧಾಂಜಲಿ



ದೆಹಲಿ ಕರ್ನಾಟಕ ಸಂಘವು ರಂಗಾಯಣದ ಹಿರಿಯ ಕಲಾವಿದ ಶ್ರೀ ಮಂಜುನಾಥ ಬೆಳಕೆರೆ ಅವರಿಗೆ ಇದೇ ಡಿಸೆಂಬರ್ 25ರಂದು ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಿತ್ತು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ದೆಹಲಿ ಕರ್ನಾಟಕ ಸಂಘದ ಜತೆ ರಂಗಾಯಣ ಮತ್ತು ಮಂಜುನಾಥ ಬೆಳಕೆರೆಯವ ರೊಂದಿಗಿನ ನಿಕಟ ಬಾಂಧವ್ಯಗಳ ಕುರಿತು ಮಾತನಾಡಿದರು. ಮಂಜುನಾಥ ಬೆಳಕೆರೆಯವರ ಅಕಾಲಿಕ ನಿಧನ ಕನ್ನಡ ರಂಗಭೂಮಿಗೆ ತುಂಬಲಾರದ ನಷ್ಟ ಎಂದರು. ಈ ಸಂದರ್ಭದಲ್ಲಿ ಶ್ರೀ ಮಂಜು ನಾಥ ಬೆಳಕೆರೆಯವರ ಕುಟುಂಬಕ್ಕೆ ಸಾಂತ್ವನ ಹೇಳುತ್ತಾ ದೆಹಲಿ ಕರ್ನಾಟಕ ಸಂಘವು ಸಾಧ್ಯವಾದ ಎಲ್ಲ ಸಹಕಾರವನ್ನು ನೀಡುವುದಾಗಿ ಭರವಸೆಯಿತ್ತರು.

ರಂಗಾಯಣದ ಕಲಾವಿದರು 30–35 ವರ್ಷಗಳ ಕಾಲ ನಿರಂತರವಾಗಿ ನಾಟಕ ಕ್ಷೇತ್ರದಲ್ಲಿ ದುಡಿದು ಕರ್ನಾಟಕಕ್ಕೆ ಕೀರ್ತಿ ತರುತ್ತಾರೆ. ಇಂತವರು ನಿವೃತ್ತಿ ಅಥವಾ ನಿಧನ ಹೊಂದಿದಾಗ ಅವರಿಗೆ ಕರ್ನಾಟಕ ಸರಕಾರವು ಇತರ ಸರಕಾರೀ ನೌಕರರಿಗೆ ಕೊಡುವ ಎಲ್ಲಾ ಸೌಲಭ್ಯಗಳನ್ನು ನೀಡಬೇಕು ಎಂದು ಸರಕಾರಕ್ಕೆ ಈ ಮೂಲಕ ನಿವೇದಿಸಿದರು. ಯಾವುದೇ ಕಾನೂನಿನ ತೊಡಕುಗಳಿದ್ದರೂ ಕೂಡಾ ಕೂಡಲೇ ಇಲಾಖೆ ಅಥವಾ ಸರಕಾರವು ಅವುಗಳನ್ನು ಪರಿಹರಿಸಿ ರಂಗಾಯಣದ ಕಲಾವಿದರನ್ನು ಪೂರ್ಣಕಾಲಿಕ ಸರಕಾರೀ ನೌಕರರೆಂದು ಪರಿಗಣಿಸಿ ಇತರ ರಾಜ್ಯ ಸರಕಾರೀ ನೌಕರರಿಗೆ ಕೊಡಮಾಡುವ ಎಲ್ಲಾ ಸವಲತ್ತು–ಸೌಲಭ್ಯಗಳನ್ನು ನೀಡಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಂಡರು. ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಎಂ ಅವರು ಮಾತನಾಡಿ ಸ್ಥಳೀಯ ದೆಹಲಿಯ ಕನ್ನಡ ಕಲಾವಿದರೆಲ್ಲಾ ಸೇರಿ ಸಾಧ್ಯವಾದ ಸಹಕಾರ ನೀಡಲು ಈ ಸಂದರ್ಭದಲ್ಲಿ ಕರೆ ಇತ್ತರು. ಅ

***ಅಭಿಮತ ವರದಿ***



# ದೇವಸನ್ನಿಧಿ-ಕುಪ್ಪಳಿಯಲ್ಲಿ ಮೂರು ದಿನ

ಕುಪ್ಪಳಿ–ಎಂದರೆ 'ಯುಗದ ಕವಿ ಜಗದ ಕವಿ, ಕುವೆಂಪು ಕಣ್ಮುಂದೆ ನಿಲ್ಲುತ್ತಾರೆ. ಕವಿ ಮನೆ, ಕವಿಶೈಲದಲ್ಲಿ ಕಳೆದ ಮೂರು ದಿನಗಳ ನೆನಪು ಮೈಮನಗಳನ್ನು ಹಿತವಾಗಿಸಿ ದಿವ್ಯಾನುಭೂತಿ ಹೃದಯವನ್ನು ತುಂಬಿಕೊಳ್ಳತೊಡಗುತ್ತದೆ. ಇದೇ ನವಂಬರ್ 11, 12, 13–ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನವು ಆಯೋಜಿಸಿದ್ದ ವಿಚಾರ ಕಮ್ಮಟದಲ್ಲಿ ಭಾಗವಹಿಸುವ ಸೌಭಾಗ್ಯ ನನ್ನದಾಗಿತ್ತು.

ಕಳೆದ ಎಂಟು ವರ್ಷಗಳಿಂದಲೂ ಡಾ. ಬೆಸಗರಹಳ್ಳಿ ರಾಮಣ್ಣ ಟ್ರಸ್ಟ್ 'ಕಥಾ ಕಮ್ಮಟ'ವನ್ನು ಆಯೋಜಿಸುತ್ತ ಬಂದಿದೆ. ಈ ಬಾರಿ ಹೊಸತೆನ, ಹೊಸ ಪ್ರಯೋಗವೆಂಬಂತೆ ಭಾಷಾತಜ್ಞರಾದ ಡಾ. ಕೆ.ವಿ. ನಾರಾಯಣ ಅವರ ನಿರ್ದೇಶನದಲ್ಲಿ ವಿಚಾರ ಕಮ್ಮಟವನ್ನು ಆಯೋಜಿಸಿತ್ತು. ವಿಷಯ 'ನುಡಿ ಮತ್ತು ನಾವು'. ಆದರೆ ಮೊದಲ ನೋಟಕ್ಕೆ ಸರಳವಾಗಿ ತೋರುವ 'ನುಡಿ'ಯ ಬೇರಿನವರೆಗೆ ಇಳಿದು, ತೊಗಟೆ, ಕೊಂಬೆ, ರೆಂಬೆ, ಟಿಸಿಲುಗಳನು ಹಾದು, ನಯವಾಗಿ ಸೀಳಿ, ಪದರಗಳನ್ನು ಬಿಡಿಸುತ್ತಾ ಹೋದಂತೆ ಏನೆಲ್ಲ ತಿರುಳು ಹೊರಟಿತು. ಯೋಚಿಸಬಲ್ಲ ಮೆದುಳನ್ನು ನಾವು ಈ ಕುರಿತು ಹೆಚ್ಚು ದುಡಿಸಿಯೇ ಇಲ್ಲವೆಂಬ ಸಂಗತಿಯೇ ಅಚ್ಚರಿಯೆನಿಸುತ್ತಿತ್ತು. ಕಮ್ಮಟದಲ್ಲಿ ಅನೇಕರು ಎಂಎ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಪತ್ರಿಕೋದ್ಯಮ, ಸಾಹಿತ್ಯ, ವಿಜ್ಞಾನ, ಕಂಪ್ಯೂಟರ್ ಸೈನ್ಸ್ ಮೊದಲಾದ ವಿಷಯಗಳನ್ನು ಓದಿ ವೃತ್ತಿಯಲ್ಲಿರುವವರು, ಕನ್ನಡ ಪಾಠ ಮಾಡುವ ಶಿಕ್ಷಕರು, ಬರಹಗಾರರು ಹಾಗೂ ಇನ್ನಿತರ ಕ್ಷೇತ್ರಗಳಿಂದ ಆಸಕ್ತರು ಭಾಗವಹಿಸಿದ್ದರು. ಭಾಗವಹಿಸುವಿಕೆಯ ಬಗ್ಗೆ ಆಯ್ಕೆಯ ಪತ್ರ, ಈಮೇಲ್ ತಲುಪಿದಾಗ ಸಂತೋಷವಾಗಿತ್ತು. ಅದರೊಂದಿಗೆ ಕಳುಹಿಸಿದ ಕೇಳ್ವಿಗೆಳನ್ನು ನೋಡಿ ಇದೇನು ನುಡಿಯ ಕುರಿತು ಏನಪ್ಪಾ ಪೂರ್ವ ತಯಾರಿ ಮಾಡಿಕೊಳ್ಳೋದು? ಏನನ್ನು ಓದೋದು? ಎಂಬುದೇ ಎಲ್ಲರ ಸಮಸ್ಯೆಯಾಗಿತ್ತು. ಎಲ್ಲರಲ್ಲೂ ಸ್ವಲ್ಪ ಗೊಂದಲ, ಸ್ವಲ್ಪ ಅಸಮಂಜಸ, ಏನಾದರಾಗಲಿ ಅಲ್ಲಿ ಹೋಗಿ ಭಾಗವಹಿಸಿದಾಗಲೇ ತಿಳಿಯುತ್ತದಲ್ಲ, ತಿಳಿಯದಿದ್ದರೆ ಕೆ.ವಿ.ಎನ್. ಸರ್ ಇದ್ದಾರಲ್ಲ ತಿಳಿಸಿಕೊಡ್ತಾರೆ ಅನ್ನುವ ನಿರಾಳತೆ ಸಮಾಧಾನ ನೀಡಿದರೂ ಒಳಗೆಲ್ಲೋ ಅಳಕು ಇದ್ದೆ ಇತ್ತು.

ನವೆಂವರ್ 11 ಕವಿ ಕುವೆಂಪುರ ಪುಣ್ಯತಿಥಿ. ನಾವೆಲ್ಲ ಬೆಳಗಿನ ತಿಂಡಿ ಮುಗಿಸಿಕೊಂಡು ಕವಿಶೈಲಕ್ಕೆ ಹೋಗಿ ಕುವೆಂಪುರವರ ಸ್ಮಾರಕಕ್ಕೆ ಪುಷ್ಪಗುಚ್ಛಗಳನ್ನರ್ಪಿಸುವುದರ ಮೂಲಕ ಕಮ್ಮಟದ ಉದ್ಘಾಟನೆಯಾಯಿತು. ರಾತ್ರಿ ಚಳಿಯೆಂದು ಕಂಬಳಿ ಹೊದ್ದು ಮಲಗಿದ್ದೆವು. ಈಗ ಕವಿಶೈಲದಲ್ಲಿ ಬಿಸಿಲ ಹೂ. ಬಿಸಿಲಿದು ಬರೀ ಬಿಸಿಲಲ್ಲವೋ ಸೂರ್ಯನ ಕೃಪೆ ಕಾಣೋ ಎನ್ನುವಂತೆ ಬೆಳಗಿನ ಬಿಸಿಲು ಚುರುಗುಡುತ್ತಿತ್ತು. ಕವಿಶೈಲದಲ್ಲಿ ಕಾಲಿಟ್ಟಾಗಿನಿಂದಲೂ ಮನದಲ್ಲಿ, ಕಿವಿಯಲ್ಲಿ 'ಆನಂದಮಯ ಈ ಜಗಹೃದಯ'ವೇ ನುಡಿದಂತಾಗುತ್ತಿತ್ತು. ಸುತ್ತಲೂ ಗಪ್ಪನೇ ಕಣ್ಣುತುಂಬುವ ಹಸಿರು, ದೃಷ್ಟಿ ಹಾಯಿಸಿದಷ್ಟೂ ವಿಶಾಲವಾಗಿ ತೆರೆದುಕೊಂಡ ಆಕಾಶ 'ಅಲ್ಲಲ್ಲಿ ತೇಲುವ ಬಿಳಿಮೋಡಗಳು. ಸಂಜೆ ಕವಿಶೈಲದಲ್ಲಿ ಕುಳಿತಾಗ ದೂರದೂರಕ್ಕೂ ಮುಗಿಲನ್ನು ಮುತ್ತುವ ಗಿರಿ ಶಿಖರಗಳು'. ಮಂಜು ಮುಸುಕಿದ ಬೆಟ್ಟದ ಹಸಿರು, ಕಂದು ಬಣ್ಣದ ಹಿನ್ನೆಲೆಯಲ್ಲಿ ನಿಸರ್ಗವೇ ಕಾವ್ಯವಾಗಿ ಹರಿಯುತ್ತಿದೆಯೇನೋ ಈ ಭೂಮಿಯ ಮೇಲೆ ಎಂದು ಭಾಸವಾಗುತ್ತಿತ್ತು. ಶಿವ ಕಾಣದೆ ಕವಿ ಕುರುಡನೋ, ಶಿವ ಕಾವ್ಯದ ಕಣ್ಣೋ...

ಈ ಕಮ್ಮಟದ ಇನ್ನೊಬ್ಬ ಹರಿಕಾರರು, ಕನ್ನಡದ ಪ್ರಖ್ಯಾತ ನಾಟಕಕಾರರು, ಕವಿಗಳು, ವಿದ್ವಾಂಸರು, ವಿಮರ್ಶಕರು ಆದ ಡಾ. ಕೆ.ವೈ.ನಾರಾಯಣಸ್ವಾಮಿ ಅವರು ಹತ್ತತ್ತು ಜನರ ಆರು ಗುಂಪುಗಳನ್ನು ಮಾಡಿ ಗುಂಪಿಗೊಂದಕ್ಕೆ ಒಬ್ಬೊಬ್ಬ ಮೇಷ್ಟ್ರನ್ನು ಅಪಾಯಿಂಟ್ ಮಾಡಿಕೊಡುತ್ತಿದ್ದರು. ಪ್ರತಿ ಚರ್ಚೆಯ ಕಕ್ಷಕ್ಕೂ ಮೇಷ್ಟ್ರುಗಳ ಬದಲಾಗುತ್ತಿದ್ದರು. ನುಡಿ ಎಂದರೇನು? ನುಡಿಯ ಬಗೆಗಿನ ನಿಮ್ಮ ಸಾಮಾನ್ಯ ಗ್ರಹಿಕೆಗಳೇನು 'ನುಡಿಯು ಮನುಷ್ಯ ವರ್ತನೆಯ ಸ್ವರೂಪವೇ' ಎಂಬ ನುಡಿಗೆ ಸಂಬಂದಿಸಿದ ಕೇಳ್ವಿಗಳನ್ನು ನಾವೆಲ್ಲ ಬೇರೆ ಬೇರೆ ಗುಂಪುಗಳಲ್ಲಿ ಚರ್ಚೆಗೆ ಕೊಟ್ಟ ಅವಧಿಯೊಳಗೆ ಚರ್ಚಿಸಿ ಮತ್ತೆ ಎಲ್ಲರೂ ಒಟ್ಟಾಗಿ ಕೂತು ಕೆ.ವಿ.ಎನ್. ನೇತೃತ್ವದಲ್ಲಿ ಪುನಃ ಚರ್ಚಿಸುತ್ತಿದ್ದೆವು. ಅಂಥ ಚರ್ಚೆಯಲ್ಲಿ ಹುಟ್ಟಿಕೊಂಡ ಪ್ರತಿ ಕೇಳ್ವಿಗಳನ್ನು, ಅನುಮಾನಗಳನ್ನು, ಬಹುಮತದಲ್ಲಿ ಗೊಂದಲ ಹುಟ್ಟಿಸಿದ ವಿಷಯವನ್ನು ಕೆವಿಎನ್ ಎತ್ತಿಕೊಂಡು ಮರು ಚರ್ಚೆಯ ಮೂಲಕವೇ ಗೊಂದಲಗಳಿಗೆ ಪರಿಹಾರವನ್ನು ವಿವರಿಸುತ್ತಿದ್ದರು. ನಡುನಡುವೆ ಹಾಸ್ಯ, ತಮಾಷೆಯೂ ಇರುತ್ತಿತ್ತು. ಇದೂ ಒಂದು ತರ ಆಡಾ ಆಡ್ತಾ ಕಲಿಯುವಂತೆ ಕಲಿಯುವಿಕೆಯ ಆಟ. ಕಲಿಕೆಯ ಪಾಠದಲ್ಲಿ ಮತ್ತೆ ಎಲ್ಲರೂ ವಿದ್ಯಾರ್ಥಿಗಳೇ ಆಗಿಹೋದಂತೆ ಲವಲವಿಕೆ ಎಲ್ಲರಲ್ಲೂ.

ನುಡಿಗೂ ನಮಗೂ ಇರುವ ನಂಟನ್ನು ತಿಳಿಯುವ ಯತ್ನ. ಇದು ತಿಳಿಯುವ ಕೆಲಸವೂ ಹೌದು; ಮತ್ತು ನಮಗೆ ತಿಳಿದಿರುವುದರಲ್ಲೆ ಎಷ್ಟು ದಿಟ ಎಷ್ಟು ಸಟೆ ಎಂಬುದನ್ನು ಅರಿತುಕೊಳ್ಳುವ ಕೆಲಸವೂ ಹೌದು. ನಮ್ಮ ಇರುವಿಕೆಯೊಡನೆ ಬೆರೆತಿರುವ ನುಡಿಯ ಜಗತ್ತಿನ ನೆಲೆಗಳು ಹಲವು. ಇವೆಲ್ಲವೂ ನಮ್ಮ ಅರಿವಿನ ಪರಿಧಿಗೆ ಬಾರದೆಯೇ ಹೋಗುತ್ತಿರುತ್ತವೆ. ಲೋಕದ ಹತ್ತಾರು ವಲಯಗಳ ನಿರ್ವಹಣೆಯನ್ನು ನುಡಿ ತನ್ನ ಹಿಡಿತದಲ್ಲಿ ಇಟ್ಟುಕೊಂಡಿರುತ್ತದೆ. ಹಾಗೆ ನೋಡಿದರೆ ನುಡಿ ಎಂಬುದು ದೀಪವಾಗಿರುವಂತೆ ಕನ್ನಡಿಯೂ ಆಗಿದೆ. ದಾರಿಯಾಗಿರುವಂತೆ ಗುರಿಯೂ ಆಗಿದೆ. ನಮ್ಮ ಲೋಕ ಗ್ರಹಿಕೆಯ ಸ್ವರೂಪವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವ ನುಡಿಯು ವ್ಯಕ್ತಿಗತ, ಸಾಮಾಜಿಕ, ಜಾಗತಿಕ ಮತ್ತು ಚಾರಿತ್ರಿಕ ಪದರುಗಳನ್ನು ನಾವು ಅರಿಯಬೇಕಾಗಿದೆ. ಇದೇ ಈ ಕಮ್ಮಟದ ಆಶಯವೂ ಹೌದು ಮತ್ತು ಇವೆಲ್ಲ ಚಿಂತನೆಯ ಬೀಜಗಳನ್ನು ಪ್ರತಿಯೊಬ್ಬರ ಅಂತಃಶ್ಚೇತನದೊಳಗೆ ಬಿತ್ತುವ ಸತ್ಕಾರ್ಯವೂ ಹೌದು ಎಂಬುದೇ ನನ್ನ ಮತ. ನಮ್ಮೊಳಗೇ ಅಂತಃಸ್ಥವಾಗಿರುವ ನುಡಿಯ ವಂಶವಾಹಿನಿಯ ಸ್ವರೂಪ, ಚರಿತ್ರೆಯನ್ನು, ವೈಜ್ಞಾನಿಕ ನೆಲೆಗಳನ್ನು ಶೋಧಿಸಿಕೊಳ್ಳುತ್ತಲೇ ಕಲಿತದ್ದು ಬಹಳಷ್ಟು.

ಇಂಗ್ಲೆಂಡಿನಲ್ಲಿ ಕೆಇ ಎಂಬ ಕುಟುಂಬದ ಮೂರು ತಲೆಮಾರಿನ ವ್ಯಕ್ತಿಗಳು ಮಾತು ಮತ್ತು ಭಾಷೆಯ ಅಸ್ವಸ್ಥತೆಯಿಂದ ಬಳಲುತ್ತಿದ್ದರು. ಕೆಇ ಎಂಬ ಇಂಗ್ಲೀಷ ಕುಟುಂಬದ ಮೇಲೆ ತನಿಖೆಯ ಪರಿಣಾಮವಾಗಿ 1990ರಲ್ಲಿ ಮೈರ್ನ್ ಗೋಪ್ನಿಕ್ ಎಂಬ

ಭಾಷಾಶಾಸ್ತ್ರಜ್ಞ ಈ ಕುಟುಂಬ ತೀವ್ರವಾದ ವಾಕ್ ದೋಷದಿಂದ ಬಳಲುತ್ತಿದೆಯೆಂಬುದನ್ನು ತಿಳಿಸಿದ. ಕುಟುಂಬದ ಪ್ರಕರಣವನ್ನು ಇನ್ಸಿಟ್ಯೂಟ್ ಲಂಡನ್ ವಿಶ್ವವಿದ್ಯಾಲಯದ ಕಾಲೇಜು ಮಕ್ಕಳ ಆರೋಗ್ಯ ವಿಭಾಗ ವಿದ್ಯಾಭ್ಯಾಸ ಮಾಡಿ ವಂಶಪಾರಂಪರಿಕ ಕಾರಣಗಳಿಂದ ಕಲಿಕೆಯ ಅಥವಾ ಅರಿವಿನ ಅಂಗ ವೈಕಲ್ಯವುಂಟಾಗಿದೆಯೆಂದು ವರದಿ ನೀಡಿತಂತೆ. ಮಾನವರಲ್ಲಿ, ಕೋಶಗಳ ರೂಪಾಂತರದಿಂದ ತೀವ್ರ ಮಾತು ಮತ್ತು ಭಾಷೆಯ ಅಸ್ವಸ್ಥತೆ ಉಂಟುಮಾಡುತ್ತದೆ. "ಭಾಷೆ ಜೀನ್" ಎಂದು ಜನಪ್ರಿಯವಾಗಿ ಈಗ ಭಾಷೆ ಬೆಳವಣಿಗೆಯಲ್ಲಿ ಒಳಗೊಂಡಿರುವ ಇತರೆ ಜೀನ್‌ಗಳು ಇವೆ, ಅವು ಭಾಷೆಯನ್ನು, ಭಾಷಾ ಕೌಶಲ್ಯವನ್ನು ನಿಯಂತ್ರಿಸುತ್ತದೆ ಎನ್ನುವಂಥ ರೋಚಕವಾದ ಅಂಶಗಳನ್ನು ಸಹ ಕಮ್ಮಟದಲ್ಲಿ ಚರ್ಚಿಸಿದ್ದಾಯಿತು. ಇಡೀ ದಿನದ ಚರ್ಚೆಯಲ್ಲಿ ದಿನಗಳೆದದ್ದೇ ತಿಳಿಯುತ್ತಿದ್ದಿಲ್ಲ. BSNL ಬಿಟ್ಟರೆ ಯಾವ ಮೊಬೈಲ್ ನೆಟ್ವರ್ಕ್ ಕೂಡ ಇರುವುದಿಲ್ಲ. ಕುಪ್ಪಳಿಯ ಏಕಾಂತದಲ್ಲಿ ನಾವಷ್ಟೇ. ಕೇಳಿಸಿದರೆ ನವಿಲಿನ ಕೂಗು, ಹಕ್ಕಿಗಳ ಕಲರವ ಕಂಡರೆ ಹಸಿರಿನ ಸಿರಿಸೊಬಗು ಅಷ್ಟೇ! ಹೊರಗಿನ ಕಿರಿಕಿರಿಯ ಲೋಕದಿಂದ ಬಹುದೂರ.

ಸಂಜೆ ಕಾಫಿ. ಲಘು ಉಪಹಾರದ ನಂತರ ವಿರಾಮವಿರುತ್ತಿತ್ತು. ಕೆಲವರು ಕವಿಮನೆಗೆ ಸುತ್ತಾಡಲು ಹೋದರೆ ಕೆಲವರು ಕವಿಮನೆಯ ಹತ್ತಿರದಲ್ಲಿಯೇ ಇರುವ ಚಹದಂಗಡಿಯಲ್ಲಿ 'ಕಷಾಯ' ಕುಡಿಯಲು ಹೋಗುತ್ತಿದ್ದೆವು. ಕೆಲವರು ಕವಿಶೈಲಕ್ಕೆ ಸೂರ್ಯಾಸ್ತವನ್ನು ತಮ್ಮ ಕ್ಯಾಮರಾಗಳಲ್ಲಿ ಸೆರೆಹಿಡಿಯಲು ಹವಣಿಸಿದರೆ. ಇನ್ನು ಕೆಲವರು ಹಾಗೇ ಸುತ್ತಾಡಿಕೊಂಡು ಮೊಬೈಲ್ ನೆಟ್ವರ್ಕ್ ಬರುವ ಜಾಗ ಹುಡುಕಿ ಓಡುತ್ತಿದ್ದರು.

ಸಂಜೆ ಏಳರಿಂದ ಸಿನೇಮ ವೀಕ್ಷಣೆ. ಮರುದಿನ ಬೆಳಿಗ್ಗೆ ಅದೇ ಚಿತ್ರದ ಕುರಿತು ಚರ್ಚೆ ಮತ್ತು ಏನಾದರೂ ಪ್ರಶ್ನೆಗಳಿದ್ದರೆ ಹಂಚಿಕೊಳ್ಳಬಹುದಿತ್ತು. ಹಾಗೆ 'ದ ಆಕ್ಟರ್' ಅನ್ನುವ ಮೂಕಿ ಚಿತ್ರವನ್ನು ನೋಡುವ ಅವಕಾಶ ಸಿಕ್ಕಿತು. 'ತಿಥಿ' ಚಿತ್ರವನ್ನು ಎರಡನೇ ಬಾರಿ ಮತ್ತೆ ನೋಡಿದೆ. ಮೂರು ದಿನ ಸಾರ್ಥಕವಾದ ಚರ್ಚೆಗಳಲ್ಲಿ ಕಳೆದ ಕುಪ್ಪಳಿ ನೆನಪಾದರೆ ಅಯ್ಯೋ ಈ ಆತ್ಮವಿಲ್ಲದ ನಗರಿಯಲ್ಲಿ ಮೂರು ದಶಕ ಕಳೆದೆನಾ ಎಂದು ಹಳಹಳಿಕೆ ಶುರುವಾಗುತ್ತದೆ. ಅ

***ರೇಣುಕಾ ನಿಡಗುಂದಿ***

## ಅಭಿನಂದನೆ



ಇತ್ತೀಚೆಗೆ ಬದಿಯಡ್ಕದಲ್ಲಿ ನಡೆದ 'ವಿಶ್ವ ತುಳುವೆರೆ ಆಯೆನೊ'ದಲ್ಲಿ ತುಳು ಭಾಷೆಗಾಗಿ ವಿಶೇಷ ಸೇವೆ ಸಲ್ಲಿಸಿರುವ ದೆಹಲಿ ಕರ್ನಾಟಕ ಸಂಘ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರನ್ನು ಕೇರಳದ ಕಂದಾಯ ಸಚಿವ ಶ್ರೀ ಇ. ಚಂದ್ರಶೇಖರನ್ ಅವರು ಸನ್ಮಾನಿಸುತ್ತಿರುವುದು, ಸಂಸದ್ ಸದಸ್ಯ ಶ್ರೀ ಆಸ್ಕರ್ ಫರ್ನಾಂಡಿಸ್, ಕಾಸರಗೋಡು ಶಾಸಕ ಶ್ರೀ ಎನ್.ಎ. ನೆಲ್ಲಿಕುಣ್ಣು, ಅಬುದಾಬಿಯ ಶ್ರೀ ಸರ್ವೋತ್ತಮ ಶೆಟ್ಟಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷೆ ಶ್ರೀಮತಿ ಎಂ. ಜಾನಕಿ ಬ್ರಹ್ಮಾವರ, ಕೇರಳ ತುಳು ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ ಶ್ರೀ ಬಿ. ಸುಬ್ಬಯ್ಯ ರೈ, ಶ್ರೀ ಧರ್ಮಪಾಲ ದೇವಾಡಿಗ, ಶ್ರೀ ಎ.ಸಿ. ಭಂಡಾರಿ, ಶ್ರೀ ರಾಜೇಶ್ ಆಳ್ವ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅ


**Saujanya PRINTING PRESS**

**A HOUSE OF QUALITY OFFSET PRINTING**

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

Office : C-95, Okhla Industrial Area, Phase-I, New Delhi-110 020
T : +91-11-40520770, M : +91-9811104398, 9811604398
E : saujanyapp2010@gmail.com | hpgp2006@gmail.com

Delhi Karnataka Sangha Abhimatha Monthly,
Jan-2017, Vol. No.27, Issue No.4, Price Rs.1/- RNI Regn. No. 53405/91, DL-SW-1/4016/16-18
Printout Date : Jan 8th / 9th, Postal Date :10th / 11th, Total Pages-16
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

ಹೊಸ ವರ್ಷ

ಹಾಗೂ

ಮಕರ ಸಂಕ್ರಾಂತಿಯ

ಶುಭಾಶಯಗಳು

Sponsored by:

नैवेद्यम्

NAIVEDYAM

*(A South Indian Eating Panorama)*

A MILK BRAND

Nandini ®

TRUSTED BY MILLIONS

Delhi NCR Super Stockist

Karnataka

Food Centre

**Reg. Office:** Delhi Karnataka Sangha Ground Floor,Rao Tula Ram Marg
Sector-12, R.K. Puram New Delhi-110022

**Depot:** A-416, Ground Floor Road No.4, Gali No. 10
Mahipalpur New Delhi-110037

Ph. +91-9599930643 / 536 / 514 | Email: info.karnatakafoodcentre@gmail.com